# ಬೆಂಗಳೂರಿನ
# ಕರಗ



ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ – 370

# ಬೆಂಗಳೂರಿನ ಕರಗ

ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

BENGALOORINA KARAGA — a omnograph on Karaga festival of Bangalore written in Kannada by Prof. S. K. Ramachandra Rao. Published by P. N. Kamat, IBH Prakashana 5th Main Road, Gandhinagar, Bangalore 560 009

Copyright © 1978 by the Publisher

*

ಮುಖಪುಟ : ಬಿ. ಕೇಸರ್‌ಸಿಂಗ್

*

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ
ಛಾಯಾ ಚಿತ್ರಗಳು ಲೇಖಕರ ಕೃಪೆಯಿಂದ

*

ಬೆಲೆ : ರೂ **1.50**

ಪ್ರಕಾಶಕರು : ಪಿ. ಎನ್. ಕಾಮತ್, ಐಬಿಎಚ್ ಪ್ರಕಾಶನ, ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು 560 054

Paper used for printi... this book was made available by the Government of India at concessional rate.

## ಕರಗದ ಹಿರಿಮೆ

"ಮೈಸೂರು ದಸರ, ಬೆಂಗಳೂರು ಕರಗ" ಎರಡೂ ನಾಡಿನಲ್ಲಿ ಹೆಸರು ಹೊತ್ತ ಹಬ್ಬಗಳು. ಮೈಸೂರು ದಸರ ಒಡೆಯರ ಕಾಲದಲ್ಲಿ ಮೊದಲಾಯಿತು; ಅರಸೊತ್ತಿಗೆ ಅಳಿದ ಮೇಲೆ ಕಳೆಗುಂದಿತು. ಆದರೆ ಬೆಂಗಳೂರು ಕರಗ ಇದಕ್ಕಿಂತ ಮೊದಲೇ ಆರಂಭವಾಗಿ ಇಂದಿಗೂ ಎಂದಿನಷ್ಟೇ ವೈಭವದಿಂದ ಜರುಗುತ್ತಿದೆ; ಅದರ ಕಳೆ ವರ್ಷವರ್ಷಕ್ಕೆ ಹೆಚ್ಚುತ್ತಿದೆಯೆಂದರೂ ಸರಿಯೇ. ಅದರ ಪ್ರಾಚೀನತೆ, ಅದರ ಸ್ವಾರಸ್ಯ, ಅದರ ಜಾನಪದ ನೆಲೆ ಇಲ್ಲಿನ ಬೇರೆ ಯಾವ ಹಬ್ಬಕ್ಕೂ ಇಲ್ಲವೆನ್ನಬಹುದು.

ಹೊಸವರ್ಷದ ಹುರುಪು ಹರಿಯುವಷ್ಟರಲ್ಲಿಯೇ ಬೆಂಗಳೂರಿನಲ್ಲಿ ಕರಗದ ಸಡಗರ ಮೊದಲಾಗುತ್ತದೆ. ಯುಗಾದಿ ಮುಗಿದ ಹದಿನೈದು ದಿನಗಳಲ್ಲಿ ಈ ಒಂಬತ್ತು ದಿನಗಳ ಉತ್ಸವ. ಪ್ರತಿವರ್ಷವೂ ವಸಂತಋತುವಿನ ಚೈತ್ರಮಾಸದಲ್ಲಿ ಶುಕ್ಲಪಕ್ಷದ ಕಡೆಯ ದಿನ ಎಂದರೆ, ಹುಣ್ಣಿಮೆಯ ರಾತ್ರಿ, ನಡೆಯುವ ಈ ಉತ್ಸವವನ್ನು ನೋಡಲು ಊರಿಗೆ ಊರೇ ಸೇರುತ್ತದೆ; ನೆರೆಯೂರುಗಳಿಂದಲೂ ಬಂದು ನೆರೆಯುತ್ತಾರೆ. ಎಲ್ಲ ಜನಾಂಗಗಳವರೂ ಭೇದವೆಣಿಸದೆ ಬೆರೆಯುತ್ತಾರೆ. ಮುಸಲ್ಮಾನರೂ ಇದರಲ್ಲಿ ಪಾಲ್ಗೊಳ್ಳುವುದೊಂದು ವಿಶೇಷ. ಶೃಂಗೇರಿ

ಜಗದ್ಗುರುಗಳಾಗಿದ್ದ, ಮಹಾತ್ಮರೆಂದು ಲೋಕವಿಖ್ಯಾತರಾಗಿದ್ದ. ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳೂ ಒಮ್ಮೆ ದಯಮಾಡಿಸಿ ಕರಗ ಹೊರಡುವಾಗ ಗುಡಿಯಲ್ಲೇ ಇದ್ದು ಪೂಜೆ ಮಾಡಿಸಿದ್ದುಂಟು. ಎಂದಮೇಲೆ, ಕರಗದ ಹಿರಿಮೆ ಎಷ್ಟೆಂದು ಬೇರೆ ಹೇಳಬೇಕೆ?

ಬೆಂಗಳೂರಿನ ಕರಗ ನಡೆಯುವುದು ಪುಟ್ಟಣ್ಣ ಚೆಟ್ಟಿ ಪುರಭವನದ ಬಳಿ ಹಲಸೂರು ಪೇಟೆಗೆ (ಈಗಿನ ನಗರ್ತ ಪೇಟೆಗೆ) ಸೇರಿದಂತಿರುವ ಧರ್ಮರಾಯಸ್ವಾಮಿ ಗುಡಿಯಲ್ಲಿ. ಕರಗ ಜರುಗುವುದು ಇಲ್ಲೊಂದೇ ಕಡೆ ಅಲ್ಲ. ಬೆಂಗಳೂರಿನಲ್ಲೇ ನಾಲ್ಕೈದು ಕಡೆ ಜರುಗುತ್ತದೆ. ಕಿಲಾರಿ ರಸ್ತೆಯ ಧರ್ಮರಾಯಸ್ವಾಮಿ ಗುಡಿ, ದಂಡಿನ ಧರ್ಮರಾಯಸ್ವಾಮಿ ಕೋಇಲ್ ರಸ್ತೆಯಲ್ಲಿರುವ ಏಕಾಮ್ರೇಶ್ವರಸ್ವಾಮಿ ಗುಡಿ, ಕಲಾಸಿಪಾಳ್ಯದ ಧರ್ಮರಾಯನ ಗುಡಿ, ಇಲ್ಲಿಯೂ ಕರಗದ ಪದ್ಧತಿಯುಂಟು. ಬೆಂಗಳೂರಿನಲ್ಲಿ ಮಾತ್ರವಲ್ಲದೆ, ಹೊಸಕೋಟೆ. ಕೋಲಾರ ಜಿಲ್ಲೆಯ ನರಸಾಪುರ, ಮಾಲೂರು, ಆನೆಕಲ್ಲು, ದೇವನಹಳ್ಳಿ, ಚಿಕ್ಕಬಳ್ಳಾಪುರ ಮೊದಲಾದ ಊರುಗಳಲ್ಲಿಯೂ ಕರಗಗಳು ನಡೆಯುವುದುಂಟು. ನಡೆಯುವ ಸಮಯ ಮಾತ್ರ ಒಂದೇ ಅಲ್ಲ; ವಿಧಿಗಳಲ್ಲಿಯೂ ಭೇದವುಂಟು. ತಮಿಳುನಾಡಿನಲ್ಲಿ ಹಲವೆಡೆ ಕರಗ ನಡೆಯುತ್ತದೆ. ಆದರೆ ಇಲ್ಲಿನಂತಲ್ಲದೆ ಅವರ ಆಡಿಮಾಸದಲ್ಲಿ ಮನೆಮನೆಯ ಕರಗ ನಡೆಯುವ ವಾಡಿಕೆಯಿದೆ. ತಮಿಳುನಾಡಿನಿಂದಲೇ ಕರಗ ಸಂಪ್ರದಾಯ ಇಲ್ಲಿಗೆ ಬಂದದ್ದು ಎಂದು ಹೇಳುತ್ತಾರೆ.

ಬೆಂಗಳೂರಿನ ಹಲಸೂರು ಪೇಟೆ ಗುಡಿಯಲ್ಲಿ ಕಾಣುವ ಕರಗದ ಸಂಭ್ರಮ ಬೇರೆಲ್ಲಿಯೂ ಕಾಣಸಿಗದು. ಇಷ್ಟು ವಿಜೃಂಭಣೆಯಿಂದ, ಇಷ್ಟು ವಿಧಿವತ್ತಾಗಿ,

ಇಷ್ಟು ವಿಸ್ತಾರವಾಗಿ ಬೇರೆಲ್ಲಿಯೂ ಕರಗ ನಡೆಯುವುದಿಲ್ಲ. ಇದು ನಡೆಯುವಾಗ ಬೆಂಗಳೂರಿಗೆ ಕಳೆಯೇರುವುದನ್ನು ಕಾಣಬಹುದು; ಜಾತ್ರೆ, ಪರಿಷೆ, ಊರಹಬ್ಬ, ನಾಡಹಬ್ಬ ಎಲ್ಲವೂ ಆಗ ಕಲೆಯುತ್ತವೆ. ಈಚೆಗೆ ನಗರಸಭೆಯುವರು ಇದೇ ಸಮಯದಲ್ಲಿ ಬೆಂಗಳೂರು ಸ್ಥಾಪಕನಾದ ಕೆಂಪೇ ಗೌಡನ ದಿನೋತ್ಸವವನ್ನು ಆಚರಿಸುವ ಪರಿಪಾಟಿಯನ್ನು ಮೂಡಿಸಿದ್ದಾರೆ. ಕರಗದ ಉತ್ಸವಕ್ಕೆ ಹಲವು ವಿಧಗಳಲ್ಲಿ ನಗರಸಭೆಯುವರು ನೆರವಾಗುತ್ತಾರೆ. ಹಿಂದಿನ ಕಾಲದಲ್ಲೂ ಕರಗದ ರಾತ್ರಿ ಸುತ್ತಮುತ್ತಲ ಪ್ರದೇಶಗಳಲ್ಲೆಲ್ಲ ನೂರಾರು ನೀರಿನ ಕೊಳಾಯಿಗಳನ್ನು ಸಜ್ಜುಗೊಳಿಸುತ್ತಿದ್ದರು; ನೆರೆ ಯುವ ಹಳ್ಳಿಯುವರ ಉಪಯೋಗಕ್ಕೆಂದು ಬೀದಿಯ ಒಂದೊಂದು ಕಂಬದಲ್ಲಿಯೂ ಸುಣ್ಣದ ಗಡಿಗೆಗಳನ್ನು ಇರಿಸುತ್ತಿದ್ದರು; ಅರವಂಟಿಗೆಗಳನ್ನು ಏರ್ಪಡಿಸುತ್ತಿದ್ದರು; ನೀರುಮಜ್ಜಿಗೆ, ಪಾನಕಗಳ ವಿತರಣೆಯನ್ನು ಕೈಗೊಳ್ಳು ತ್ತಿದ್ದರು. ಕರಗದ ಸಂಚಾರ ಸುಗಮವಾಗಿ ಸಾಗುವಂತೆ ನೆರ ವಾಗುತ್ತಿದ್ದರು.

## ಇಲ್ಲಿ ಕರಗ ಶುರುವಾದದ್ದು

ಬೆಂಗಳೂರು ಮೊದಲಾಗಿ ನಾನ್ನೂರ ನಲವತ್ತು ವರ್ಷ ಗಳ ಸುಮಾರಾಯಿತು. 'ಯಲಹಂಕನಾಡಪ್ರಭು' ವೆಂದು ಹೆಸರಾಗಿದ್ದ ಕೆಂಪೇಗೌಡ ಆಗಲೇ ಇಲ್ಲಿ ಕೋಟೆಯನ್ನು ಕಟ್ಟಿದ್ದು. ಆಗಿನ ಊರೆಂದರೆ ಈಗಿನ ಪೇಟೆಗಳಷ್ಟೇ — ದೊಡ್ಡಪೇಟೆ, ಚಿಕ್ಕಪೇಟೆ, ಬಳೇಪೇಟೆ, ನಗರ್ತಪೇಟೆ, ಮೊದಲಾದುವು. ಈ ಕಡೆ ಸಂಪಂಗಿಕೆರೆ, ಆ ಕಡೆ ಧರ್ಮಾಂ ಬುಧಿಕೆರೆ (ಈಗಿನ ಸುಭಾಷನಗರ), ಇನ್ನೊಂದು ಕಡೆ ಈಗಿನ

ಕೃಷ್ಣರಾಜೇಂದ್ರ ಮಾರುಕಟ್ಟೆ–ಇವು ಹಳೆಯ ಊರಿನ ಎಲ್ಲೆ ಕಟ್ಟುಗಳು. ಕೆಂಪೇಗೌಡ ವಿಜಯನಗರದರಸರ ಸಾಮಂತ. ಆ ಸಾಮ್ರಾಜ್ಯ ಮುರಿದು ಬಿದ್ದ ಮೇಲೆ ಬಿಜಾಪುರದ ಸುಲ್ತಾನ ಮಹಮ್ಮದ್ ಆದಿಲ್ ಶಾ ಈ ಕೋಟೆಯನ್ನು ವಶಪಡಿಸಿಕೊಂಡು, ತನ್ನ ಪಡೆಯ ಒಡೆಯನಾಗಿದ್ದ ಶಹಜೀ ಭೋಂಸ್ಲೆಗೆ (—ಶಿವಾಜಿ ಛತ್ರಪತಿಯ ತಂದೆ–) ಜಹಗೀರಿಯಾಗಿ ಕೊಟ್ಟ. ಇದು ನಾನ್ನೂರ ಹತ್ತು ವರ್ಷಗಳಷ್ಟು ಹಿಂದಿನ ಮಾತು. ಶಹಜೀ ತೀರಿಕೊಂಡ ಮೇಲೆ ಈ ಊರಿನ ಜಹಗೀರಿ ಅವನ ಎರಡನೆಯ ಮಗ (–ಶಿವಾಜಿಯ ಮಲತಮ್ಮ–) ವೆಂಕಾಜಿಯ ವಶಕ್ಕೆ ಬಂದಿತು. ಅವನು ಈ ಊರನ್ನು ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಜ ಒಡೆಯರಿಗೆ ಮಾರಬೇಕೆಂದು ಮಾತುಕತೆ ನಡೆಸುತ್ತಿರುವಾಗಲೇ ಅವರಂಗಜೇಬ ಚಕ್ರವರ್ತಿಯ ಸೇನೆ ಇಲ್ಲಿಂದ ವೆಂಕಾಜಿಯನ್ನು ಓಡಿಸಿ ಊರನ್ನು ವಶಪಡಿಸಿಕೊಂಡಿತು. ಮೂರು ವರ್ಷಗಳನಂತರ ಅದರ ನಿರ್ವಾಹಕನಾಗಿದ್ದ ಸಿರಾದ ಸುಬೇದಾರನು ಊರನ್ನು ಚಿಕ್ಕದೇವರಾಜ ಒಡೆಯರಿಗೆ ಮೂರುಲಕ್ಷ ರೂಪಾಯಿಗಳಿಗೆ ಮಾರಿದ. ಇದು ನಡೆದದ್ದು 1690ರ ಸುಮಾರಿಗೆ.

ಚಿಕ್ಕದೇವರಾಜರು ಕೆಂಪೇಗೌಡನ ಮಣ್ಣುಕೋಟೆಯ ದಕ್ಷಿಣಕ್ಕೆ ಇನ್ನೊಂದು ಕೋಟೆಯನ್ನು ಕಟ್ಟಿ ಊರನ್ನು ಬೆಳೆಸಿದರು. ಈಗ ಊರು ಕೆಂಪಾಂಬುಧಿ ಕೆರೆಯವರೆಗೂ ಬೆಳೆಯಿತು. ಅವರು ಕಾಲವಾದ ಮೇಲೆ ಇಮ್ಮಡಿ ಕೃಷ್ಣದೇವರಾಜ ಒಡೆಯರು ಈ ಊರನ್ನು ತಮ್ಮ ಸೇನಾನಿಯೂ ಹಿತೈಷಿಯೂ ಆಗಿದ್ದ ಹೈದರ್ ಅಲಿಖಾನನಿಗೆ ಬಹುಮಾನವಾಗಿ ಕೊಟ್ಟರು. ಇದು ಇನ್ನೂರ ಇಪ್ಪತ್ತು ವರ್ಷಗಳಷ್ಟು ಹಿಂದೆ

ನಡೆದದ್ದು. ಮುಂದೆ ಇವನೇ ನಾಡಿಗೆ ಒಡೆಯನಾದಾಗ, ಚಿಕ್ಕದೇವರಾಜರ ಕೋಟೆಯನ್ನು ಬಲಪಡಿಸಿ ಊರಿನ ಹಿರಿಮೆಯನ್ನು ಹೆಚ್ಚಿಸಿದನು. ದಕ್ಷಿಣದ ಕಾದಾಟಗಳಲ್ಲಿ ಅವನು ತಮಿಳುದೇಶದ ತೋಟಗಾರರ ಜಾಣ್ಮೆಯನ್ನು ಮೆಚ್ಚಿಕೊಂಡು, ಅವರಲ್ಲಿ ಕೆಲವರನ್ನು ಇಲ್ಲಿಗೆ ಕರೆಯಿಸಿಕೊಂಡನು. ಉದ್ಯಾನಗಳಲ್ಲಿ ಅವನಿಗೆ ತುಂಬ ಆಸಕ್ತಿ. ಬೆಂಗಳೂರಿನ ಲಾಲ್‌ಬಾಗ್, ಶ್ರೀರಂಗಪಟ್ಟಣದ ದರಿಯಾ ದೌಲತ್‌ಬಾಗ್ ಇವೆಲ್ಲ ಅವನ ಆಶೆಯ ಕುಡಿಗಳೇ; ತಮಿಳುನಾಡಿನಿಂದ ಬಂದ ತೋಟಗಾರರ ಕೈಕೆಲಸಗಳೇ.

ತಮಿಳುನಾಡಿನ ಕಾಂಚೀಪುರ, ಚಿದಂಬರ ಮೊದಲಾದ ಕಡೆಗಳಿಂದ ಇಲ್ಲಿಗೆ ಬಂದ ತೋಟಗಾರರು ಇಲ್ಲಿನವರ ಮಾತಿನಲ್ಲಿ 'ತಿಗಳ'ರೆನಿಸಿಕೊಂಡರು. ಇವರು ಹಳೆಯ ಊರಿನಲ್ಲಿ ಒಂದೆಡೆ ನೆಲೆಸಿದಾಗ ಅದು 'ತಿಗಳರಪೇಟೆ'ಯಾಯಿತು. ಇದು ಈಗಲೂ ಇದೆ. ಅದರ ಅಂಚಿನಲ್ಲಿ ತಮ್ಮ ಕುಲದೇವರಾದ ಧರ್ಮರಾಯಸ್ವಾಮಿಯ ಆರಾಧನೆಗೆ ಗುಡಿಯೊಂದನ್ನು ಕಟ್ಟಿಕೊಂಡರು. ತಮ್ಮ ತೌರೂರಿನಲ್ಲಿ ಮಾಡುತ್ತಿದ್ದಂತೆ ಇಲ್ಲಿಯೂ ವರ್ಷಂಪ್ರತಿ ಈ ದೇವರ ಹಬ್ಬವನ್ನೂ ಆಚರಿಸತೊಡಗಿದರು. ಇದೇ ಕರಗ. ಎಂದರೆ, ಈ ಉತ್ಸವ ಇಲ್ಲಿ ನಡೆಯಲಾರಂಭವಾಗಿ ಇನ್ನೂರಹತ್ತು ವರ್ಷಗಳಷ್ಟಾಗಿರಬಹುದು. ಹೈದರ್ ಅಲಿ ಮತ್ತು ಟೀಪೂಸುಲ್ತಾನರ ಕಾಲದಲ್ಲಿಯೂ ಕರಗ ನಡೆಯುತ್ತಿದ್ದಿರಬೇಕು.

ಮುಂದೆ, ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಬೆಂಗಳೂರಿನ ಧರ್ಮರಾಯನ ಗುಡಿಗೆ ಸನ್ನದು, ಭೂಮಿ ಮೊದಲಾದುವು ಸಂದ ಉಲ್ಲೇಖವಿದೆ. ಈ ನಡುವೆ (1834 ರಿಂದ 1861) ಇಲ್ಲಿನ ಆಡಳಿತವನ್ನು ನಿರ್ವಹಿಸಿದ ಸರ್

ಮಾರ್ಕ್ ಕಬ್ಬನ್ ಕರಗದ ವಿಚಾರದಲ್ಲಿ ಆಸಕ್ತಿ ತೋರಿಸಿದ ಉಲ್ಲೇಖವಿದೆ. ಕರಗದ ಸಮಯದಲ್ಲಿ ನಡೆಯುವ ಅಲಗು ಸೇವೆಗೆ ಮತ್ತು ವೀರಕುಮಾರರು ಇರಿಸಿಕೊಳ್ಳುವ ಕತ್ತಿಗೆ ಲೈಸೆನ್ಸ್ ಪಡೆಯಬೇಕಾದ ಅಗತ್ಯವಿಲ್ಲವೆಂದು ಆತನೇ ವಿನಾಯತಿ ಕೊಟ್ಟನೆಂದು ಹೇಳುತ್ತಾರೆ.

ಮೊದಲಿಗೆ ಈಗಿನ 'ಕರಗದ ಕುಂಟೆ' (ನಗರಸಭೆ ಕಛೇರಿಯಿಂದ ಶೇಷಾದ್ರಿ ಅಯ್ಯರ್ ಸ್ಮಾರಕ ಭವನದ ಕಡೆ ಹೋಗುವಾಗ ಕಬ್ಬನ್ ಪಾರ್ಕಿನಲ್ಲಿ ಅಶ್ವತ್ಥಕಟ್ಟೆಯ ಹಿಂಬದಿಯಿರುವ ಕುಂಟೆ) ಮತ್ತು ಈಗಿನ ನಗರಸಭೆ ಕಛೇರಿಯಿರುವ ಸ್ಥಳವೆಲ್ಲವೂ ಧರ್ಮರಾಯನ ಗುಡಿಗೇ ಸೇರಿದ್ದಂತೆ ಇದ್ದಿತೆಂದು ಹೇಳುವುದುಂಟು. ಹಲವಾರು ಗ್ರಾಮಗಳು ಮಾನ್ಯವಾಗಿ ಇದ್ದುವಂತೆ. ಈಗ ಇವೆಲ್ಲವೂ ಬಹುಮಟ್ಟಿಗೆ ಕೈಬಿಟ್ಟು ಹೋಗಿವೆ. ಆದರೆ ಕರಗ ನಡೆಯುವುದಾಗಲಿ, ವಿಜೃಂಭಣೆಯಿಂದ ಈ ಸ್ಥಳಗಳಲ್ಲೆಲ್ಲ ಸಂಚಾರವಾಗಲೀ ಈವರೆಗೆ ನಿಂತಿಲ್ಲ. ಸುಮಾರು ಇನ್ನೂರು ವರ್ಷಗಳಿಂದ ಇಂದಿನವರೆಗೆ ಕರಗ ನಡೆಯಲಿಲ್ಲವೆಂಬ ವರ್ಷವೇ ಜನರ ನೆನಪಿನಲ್ಲಿಲ್ಲ. 1947ರ ಕೋಮುವಾರು ಗಲಭೆಯಲ್ಲಿ ಉದ್ರಿಕ್ತ ವಾತಾವರಣವಿದ್ದಾಗಲೂ, ಸರಕಾರದ ಕಡೆಯಿಂದ ಸಾರ್ವಜನಿಕ ಸಭೆಗಳಿಗೆ ಮೆರವಣಿಗೆಗಳಿಗೆ ಪ್ರತಿಬಂಧಕವಿದ್ದಾಗಲೂ, ಕರಗ ಗುಡಿಯಿಂದ ಹೊರಟೇ ಹೊರಟಿತು; ನಾಲ್ಕು ಬೀದಿಗಳ ಸಂಚಾರವಾದ ಮೇಲೆ ಗುಡಿಗೆ ಹಿಂದಿರುಗಿತು.

## ಕರಗದ ಕುಲದವರು

ಹಲಸೂರು ಪೇಟೆಯ (ನಗರ್ತಪೇಟೆಯ) ಕರಗವನ್ನು ನಡೆಸುವವರು 'ತಿಗಳರು'. ಈ ಹೆಸರು 'ತಮಿಳರು' ಎನ್ನು

ವುದರ ದೇಸಿಯೆಂದು ಸೂಚನೆಯಿದೆ. ಅದು ಸಮರ್ಪಕವಾದ ಹೆಸರಲ್ಲವಾದರೂ ಬಳಕೆಗಂತೂ ಬಂದುಬಿಟ್ಟದೆ. ಆ ಜನಾಂಗ ದವರೇ ಕರೆದುಕೊಳ್ಳುವಂತೆ ಅವರು 'ವನ್ನಿಯರು' ಎಂದರೆ ವಹ್ನಿಕುಲದವರು. ವಹ್ನಿಯೆಂದರೆ ಬೆಂಕಿ; ಅವರದ್ದು ಅಗ್ನಿ ವಂಶ. ವರ್ಣದಲ್ಲಿ ಕ್ಷತ್ರಿಯರು. ಮೊದಲಿಗೆ ರಾಜ್ಯವಾಳುತ್ತ ಪಾಳೆಯಪಟ್ಟು ನಡೆಸುತ್ತಿದ್ದವರು. ಈಚೆಗೆ ತೋಟಗಾರಿಕೆ, ಹೂಗಾರಿಕೆಗಳೇ ಮುಖ್ಯ ವೃತ್ತಿಗಳಾಗಿ ನಿಂತಿವೆ. ಬೆಂಗಳೂರು ಸುತ್ತಮುತ್ತ ಮತ್ತು ತುಮಕೂರು, ಕೋಲಾರ ಜಿಲ್ಲೆಗಳ ಲ್ಲಿಯೂ ಈ ಜನರು ನೆಲೆಸಿದ್ದಾರೆ. ಜನಸಂಖ್ಯೆ 1951ರಲ್ಲಿ 1,06,566 ಇದ್ದಿತು. ಹೈದರ್ ಆಲಿಯ ಕಾಲದಲ್ಲಿ ತಮಿಳು ನಾಡಿನಿಂದ ಬೆಂಗಳೂರಿಗೆ ಬಂದವರೆಂದು ಪ್ರತೀತಿಯಿದೆ. ಮೊದಮೊದಲು ಬಂದವರು ಈಗ ಕನ್ನಡವನ್ನೇ ಬಳಸು ತ್ತಾರೆ. ಆಮೇಲೆ ಬಂದವರು ಅಷ್ಟಿಷ್ಟು ತಮಿಳನ್ನು ಉಳಿಸಿ ಕೊಂಡಿದ್ದಾರೆ.

ಅವರ ಕುಲವನ್ನು ಅಗ್ನಿಕುಲ ಎಂದು ಕರೆಯುವುದಕ್ಕೆ ಕಾರಣವಾಗಿ ಕಥೆಗಳಿವೆ. ಬ್ರಹ್ಮನು ಯಾಗಮಾಡಿದಾಗ ಅವನ ಅಗ್ನಿಕುಂಡದಿಂದ ಭೃಗು, ಅಂಗಿರಸ ಮತ್ತು ಕವಿ ಎಂಬ ಮೂವರು ಹೊರಹೊಮ್ಮಿದರು. ಭೃಗುವನ್ನು ವರು ಣನೂ, ಅಂಗಿರಸನನ್ನು ಅಗ್ನಿಯೂ, ಕವಿಯನ್ನು ಬ್ರಹ್ಮನೂ ತಂತಮ್ಮ ಸಂತಾನವನ್ನಾಗಿ ಸ್ವೀಕರಿಸಿದರು. ಅಗ್ನಿಯ ಸಂತಾನವಾದ ಅಂಗಿರಸನ ಸಂತತಿಯವರೇ ಅಗ್ನಿಕುಲದ ಇವರು; ವಹ್ನಿಜರು (ಎಂದರೆ ಬೆಂಕಿಯಿಂದ ಹುಟ್ಟಿದವರು), ಅದೇ ಜನರ ಆಡುಮಾತಿನಲ್ಲಿ 'ಬನ್ನಿಯರು' ಅಥವಾ 'ವನ್ನಿ ಯರು' ಎಂದಾಯಿತು. ಅಗ್ನಿರೂಪಿಣಿಯಾದ ದೇವಿಯಿಂದ

ಕಿಡಿಗಳಂತೆ ಸಿಡಿದೆದ್ದು ಬಂದವರು ಈ ಕುಲದ ವೀರ ಕುಮಾರರು, ಗೌಡ–ಗಣಾಚಾರಿ–ಪೂಜಾರಿಯರು.

ಮಹಾಭಾರತದ ವೀರರಮಣಿಯಾದ ದ್ರೌಪದಿಯೂ ಅಗ್ನಿಸಂಭೂತೆ. ಆದುದರಿಂದ ಇವಳೇ ಇವರ ಕುಲದೇವತೆ; ದ್ರೌಪದಿಯಮ್ಮ, ಪಾಂಚಾಲಮ್ಮ, ಎಂದು ಕರೆಯುತ್ತಾರೆ; ಮುತ್ಯಾಲಮ್ಮ, ಗಂಗಮ್ಮ ಇವರೆಲ್ಲ ಈ ದೇವತೆಯ ಲೀಲಾ ಮೂರ್ತಿಗಳೇ ಎಂದು ನಂಬಿಕೆ. ಈ ದೇವತೆಯ ಮುಖ್ಯ ಉತ್ಸವ ಕರಗವಾದುದರಿಂದ ಇವರು 'ಕರಗದ ಕುಲದವರು'. ದ್ರೌಪದಿಗೆ ಐವರು ಪಾಂಡವರೂ ಗಂಡಂದಿರಾದರೂ ಅವ ರಲ್ಲಿ ಧರ್ಮರಾಯ ಹಿರಿಯವನಾದುದರಿಂದ ಇವರು 'ಧರ್ಮ ರಾಯನ ಒಕ್ಕಲು'; ದ್ರೌಪದಿಯ ಕರಗವಾದರೂ 'ಧರ್ಮ ರಾಯನ ಕರಗ'ವೆಂದೇ ಪ್ರತೀತಿಯಿರುವುದು. ಇವರಲ್ಲಿ ಕೆಲ ವರನ್ನು 'ಅರವ ರಡ್ಡಿಯರು' ಎಂದೂ ಕರೆಯುವುದುಂಟು. ಅವರ ಆಡುಮಾತು ತಮಿಳಾಗಿ ಅವರು ಅಲ್ಲಲ್ಲಿ ಅರಸರಾಗಿದ್ದು ದರಿಂದ.

ಇವರ ಮೂಲಪುರುಷ 'ಬನ್ನಿರಾಯ' (ಎಂದರೆ ವಹ್ನಿ ರಾಜ). ಅಗತ್ಯ ಬಿದ್ದಂತೆ ಮಾರಮ್ಮ, ಮರಿಗೆಮ್ಮ, ಮುತ್ಯಾ ಲಮ್ಮ, ಯಲ್ಲಮ್ಮ, ಗಂಗಮ್ಮ, ಕೊಲ್ಲಾಪುರದಮ್ಮ, ಜಡೆ ಮುನಿ, ಸಿದ್ದೇದೇವರು ಮೊದಲಾದ ಇತರ ದೇವತೆಗಳನ್ನೂ ಪೂಜಿಸುವುದುಂಟು. ಈಚೆಗೆ ಇವರಲ್ಲಿ ಶೈವ, ವೈಷ್ಣವ ಸಂಪ್ರ ದಾಯಗಳೆರಡರ ಪ್ರಭಾವವೂ ಸೇರಿಬಂದಿದೆ. ಪ್ರಮುಖ ವಾಗಿ ಆದಿಶಕ್ತಿಯ ಆರಾಧಕರಾದರೂ, ಅವರ ಕರಗದಲ್ಲಿ ವೈಷ್ಣವಾಗಮದ ಅನುಸರಣೆ ಕಂಡುಬರುತ್ತದೆ. ಕರಗದ ಸಡಗರವನ್ನು ಇಮ್ಮಡಿಸುವುದು ಅವರು "ಗೋವಿಂದಾ! ಗೋವಿಂದಾ!" ಎಂದು ಮಾಡುವ ಘೋಷ. ಬಹುಶಃ ಪಾಂಡ

ವರ ಪೂಜೆ ಪ್ರಚಲಿತವಾಗಿದ್ದ ಕಾಲದಿಂದ ಉಳಿದುಬಂದಿರುವ ನೆನಪು ಇದು. ಬನ್ನಿಯರ ಹಿಂದಿನವರು ಕಾಂಚೀಪುರದ ಪಲ್ಲವರ ನೆಂಟರೆಂದು ಹೇಳುವುದಿದೆ. ಕಡಲತೀರದ ಮಾಮಲ್ಲಪುರದಲ್ಲಿ (ಜನರು ಮಹಾಬಲಿಪುರವೆಂದು ಮಾರ್ಪಡಿಸಿದ್ದಾರೆ!) ಪಂಚರಥಗಳು ಪಂಚಪಾಂಡವರ ಹೆಸರಿನಲ್ಲಿರುವುದೂ, ಅಲ್ಲಿನ ಪ್ರಮುಖ ರಥ ದ್ರೌಪದಿಗೆ ಅಂಕಿತವಾಗಿರುವುದೂ, ಸನಿಹದ ಬೋರುಬಂಡೆಯ ಮಂಟಪದಲ್ಲಿ ಗೋವಳಕೃಷ್ಣನ ಶಿಲ್ಪಫಲಕವಿರುವುದೂ ಪಲ್ಲವರ ಧಾರ್ಮಿಕ ನೆಲೆಯನ್ನು ಸೂಚಿಸುತ್ತವೆ. ಧರ್ಮರಾಜನ ಪೂಜೆ ಈ ಕಡೆಯೂ ಒರಿಸ್ಸ, ಬಂಗಾಳ ಪ್ರಾಂತ್ಯಗಳಲ್ಲಿಯೂ ಇದ್ದಿತು; ಪಾಂಡವರ ಸ್ಮರಣೆಯಂತೂ ದೇಶದಲ್ಲೆಲ್ಲ ಗುಡಿಗಳಲ್ಲಿಯೂ ಪ್ರತಿಷ್ಠೆಗಳಲ್ಲಿಯೂ ಅಡಗಿದೆ.

ಪಂಗಡದ ಆಡಳಿತ ಗೌಡ–ಗಣಾಚಾರಿಗಳ ಹೊಣೆ. ಕುಲದ ಹಿರಿಯ 'ಗೌಡ'; ಲೌಕಿಕ ವ್ಯವಹಾರ ಅವನ ಪಾಲಿನದು. ಕುಲದ ಆಚಾರ, ಕಟ್ಟು, ಕಟ್ಟಳೆಗಳನ್ನೆಲ್ಲ ಚೆನ್ನಾಗಿ ಅರಿತು, ಆದರ ನಿರ್ವಹಣೆಯ ಹೊಣೆಯನ್ನು ಹೊತ್ತವನು 'ಗಣಾಚಾರಿ'. ಇವನು ಗೌಡನ ಅಧಿಕಾರದಲ್ಲಿ ಎರಡನೆಯವನು. ಧಾರ್ಮಿಕ ವಿಚಾರಗಳಲ್ಲೆಲ್ಲ ಇವನೇ ಮಾರ್ಗದರ್ಶಿ, ಪರಮಾಧಿಕಾರಿ. ಉತ್ಸವಾದಿ ವಿವರಗಳಲ್ಲಿ ಕರಗ–ಪೂಜಾರಿ, ದುರ್ಗಾ–ಪೂಜಾರಿ (ಅಥವಾ ಘಂಟೆ–ಪೂಜಾರಿ) ಇವರಿಬ್ಬರೂ ಪ್ರಮುಖರು. ಇವರಲ್ಲಿ ದುರ್ಗಾ–ಪೂಜಾರಿಯದೇ ಹಿರಿಯ ಪಟ್ಟ; ಉತ್ಸವದ ವಿಧಿಗಳನ್ನೆಲ್ಲ ತಿಳಿದಿದ್ದು ಕಾಲಕಾಲಕ್ಕೆ ವಿಧ್ಯುಕ್ತವಾಗಿ ವಿವರಗಳು ಜರುಗುವಂತೆ ಮಾಡುವವನು ಇವನೇ. ಕರಗ–ಪೂಜಾರಿಗೆ ಇವನೇ ಮಾರ್ಗದರ್ಶಿ. ವೈದಿಕ ಸಂಪ್ರದಾಯದಲ್ಲಿ ಆಗಮಿಕನಿದ್ದಂತೆ ಇಲ್ಲಿ ಇವನು;

ಕುಲದ ಪುರೋಹಿತನೆಂದರೂ ಸರಿಯೇ. ಇವರೆಲ್ಲ ಮನೆತನ ದಿಂದ ಈ ವೃತ್ತಿಗಳನ್ನು ಪಡೆದುಕೊಂಡವರು: ಆನುವಂಶಿಕ ವಾಗಿ ಅಧಿಕಾರವನ್ನು ನಿರ್ವಹಿಸುತ್ತಾರೆ.

ಇವರಲ್ಲದೆ ಕರಗದ ಉತ್ಸವದಲ್ಲಿ 'ವೀರಕುಮಾರ'ರು ಇರುತ್ತಾರೆ. ಕರಗದ ಉತ್ಸವದಲ್ಲಿ ಗಣಾಚಾರಿ, ಕರಗ-ಪೂಜಾರಿ, ದುರ್ಗಾ-ಪೂಜಾರಿ ಇವರಿಗೆ ನೆರವಾಗಿ, ಪರಿವಾರ ವಾಗಿ ಇವರು ತಮ್ಮ ಕೆಲಸವನ್ನು ನಿರ್ವಹಿಸುತ್ತಾರೆ. ಇವರೆಲ್ಲ ಕುಲದವರೇ ಆಗಿದ್ದರೂ, 'ವೀರಕುಮಾರ'ರಾಗಲು ದೀಕ್ಷೆ ಯೊಂದನ್ನು ತಳೆಯಬೇಕು; ಕುಲದ ಹಿರಿಯರ ಮುಂದೆ ವ್ರತವನ್ನು ಹಿಡಿಯಬೇಕು. ಒಮ್ಮೆ ವ್ರತವನ್ನು ಹಿಡಿದರೆ ಸಾಕು; ಬದುಕಿರುವವರೆಗೂ ನಡೆಯುತ್ತದೆ. ಈ ವ್ರತವನ್ನು ಹಿಡಿದವನು ಸತ್ತರೆ, ಅವನ ವ್ರತವನ್ನು ಹಿಂದಕ್ಕೆ ಪಡೆಯುವ ವ್ಯವಸ್ಥೆಯೂ ಉಂಟು.

## ಕರಗದ ಹಿನ್ನೆಲೆ

ಕರಗ ಉತ್ಸವದ ಹಿನ್ನೆಲೆಯಲ್ಲಿ ಮಹಾಭಾರತದ ಕಥೆಯಿದೆಯೆಂದು ಮೊದಲೇ ಹೇಳಿದೆಯಷ್ಟೆ. ಅದರಲ್ಲಿ ಎರಡು ಪ್ರಸಂಗಗಳು ಮುಖ್ಯವಾಗಿ ಸೇರಿಬಂದಿವೆ. ಒಂದು ದ್ರೌಪದಿಯ ಮದುವೆ, ಇನ್ನೊಂದು ದ್ರೌಪದಿಯು ಆದಿ ಶಕ್ತಿಯಾಗಿ ಕಾಣಿಸಿಕೊಂಡಿದ್ದು. ದ್ರೌಪದಿಯ ಮದುವೆಯ ಪ್ರಸಂಗವೇನೋ ಮಹಾಭಾರತದ ಆದಿಪರ್ವದಲ್ಲೇ ವಿಸ್ತಾರ ವಾಗಿ ಬರುತ್ತದೆ; ಇನ್ನೊಂದು ಪ್ರಸಂಗ ಮಹಾಭಾರತದಲ್ಲಿ ಕಾಣಸಿಗುವುದಿಲ್ಲ.

ದುರ್ಯೋಧನನು ಪಾಂಡವ ಸೋದರರನ್ನು ಕೊಲ್ಲ ಲೆಂದು ವಾರಣಾವತದಲ್ಲಿ ಅರಗಿನ ಮನೆಯನ್ನು ಕಟ್ಟಿಸಿ ಅದ

ರಲ್ಲಿ ಅವರನ್ನಿರಿಸಿ ಕೊಲ್ಲಲೆತ್ನಿಸಿದನಷ್ಟೆ. ಭೀಮನ ನೆರವಿನಿಂದ ಎಲ್ಲರೂ ತಾಯಿ ಕುಂತಿಯೊಂದಿಗೆ ಪಾರಾದ ಮೇಲೆ, ದ್ರುಪದರಾಜನ ಮಗಳ ಸ್ವಯಂವರದ ಸುದ್ದಿ ಕೇಳಿ ಅಲ್ಲಿಗೆ ಬಂದರು. ಪಂಚಾಲ ದೇಶದ ಅರಸನಾದ ದ್ರುಪದ (ಯಜ್ಞ ಸೇನನೆಂದು ಇನ್ನೊಂದು ಹೆಸರು) ಮಗನನ್ನು ಪಡೆಯ ಬೇಕೆಂದು ಮಾಡಿದ ಯಾಗದಲ್ಲಿ ಯಾಗಾಗ್ನಿಯಿಂದಲೇ ಧೃಷ್ಟದ್ಯುಮ್ನನೆಂಬ ಮಗನೂ, ಕೃಷ್ಣೆಯೆಂಬ ಮಗಳೂ ಹೊರಬಂದರು. ಅವಳು ಕರಿಯ ಬಣ್ಣದವಳಾದ್ದರಿಂದ ಕೃಷ್ಣೆಯೆನಿಸಿಕೊಂಡಳು; ದೇವತೆಗಳ ಕಾರ್ಯವನ್ನು ಕೈಗೂಡಿಸಲೆಂದೇ ಮನುಷ್ಯಳಾಗಿ ಅವಳು ಮೂಡಿಬಂದದ್ದ ರಿಂದ 'ಅಮರವರ್ಣಿನಿ'. ಅವಳಿಂದ ಕಾಲಾನುಕ್ರಮದಲ್ಲಿ ಕೌರವರಿಗೆ ದೊಡ್ಡ ಆತಂಕ ಒದಗುವುದೆಂದು ಅವಳು ಕಾಣಿಸಿಕೊಂಡಾಗಲೇ ತಿಳಿಯಿತು. ದ್ರುಪದರಾಜನ ಮಗ ಳಾಗಿ ಅವತರಿಸಿದ್ದರಿಂದ ದ್ರೌಪದಿ; ಪಂಚಾಲರಾಜನ ಮಗ ಳಾಗಿ ಪಾಂಚಾಲಿ.

ಪಂಚಾಲ ದೇಶಕ್ಕೆ ಬಂದ ಪಾಂಡವರು ಗುಟ್ಟಾಗಿ ಕುಂಬಾರನ ಮನೆಯಲ್ಲಿ ಬ್ರಾಹ್ಮಣರಂತೆ ತಂಗಿದ್ದರು. ಮತ್ಸ್ಯ ಯಂತ್ರ ಭೇದವನ್ನು ಮಾಡುವವರಿಗೆ ದ್ರೌಪದಿಯನ್ನು ಕೊಡುವುದಾಗಿ ದ್ರುಪದರಾಜನು ಪಣವಿಟ್ಟು ನೂರಾರು ಅರಸರನ್ನು ನೆರೆಯಿಸಿದ್ದನು. ಭೀಮಾರ್ಜುನರು ಈ ಸಭೆಗೆ ಹೋದರು. ಅಲ್ಲಿ ಶಲ್ಯ, ಕರ್ಣ, ದುರ್ಯೋಧನ ಮೊದಲಾದ ವರೂ ಇದ್ದರು. ಯಾರಿಂದಲೂ ಆಗದೇ ಇದ್ದ ಈ ಸಾಹಸ ಕಾರ್ಯವನ್ನು ಅರ್ಜುನನು ನೆರವೇರಿಸಿದನು. ಬಿಳಿಯ ಮಲ್ಲಿಗೆ ಹೂವಿನ ಮಾಲೆಯನ್ನು ಹಿಡಿದು ನಿಂತಿದ್ದ ದ್ರೌಪದಿ ಅದನ್ನು ಅವನ ಕೊರಳಿಗೆ ಹಾಕಿದಳು. ಅರ್ಜುನ

ಅವಳೊಂದಿಗೆ ಸಭಾಭವನವನ್ನು ಬಿಟ್ಟು ಹೊರಟನು. ಪಾಂಡವರು ಆ ಊರಿನಲ್ಲಿದ್ದ ಸುಳುವು ಯಾರಿಗೂ ತಿಳಿದಿರಲಿಲ್ಲ.

ಅರ್ಜುನನನ್ನು ಬ್ರಾಹ್ಮಣನೆಂದೇ ಬಗೆದಿದ್ದ ಆ ರಾಜರಿಗೆಲ್ಲ "ದ್ರುಪದನು ತನ್ನ ಮಗಳನ್ನು ಬ್ರಾಹ್ಮಣನಿಗೆ ಕೊಡುತ್ತಿದ್ದಾನೆ"ಂದು ಸಿಟ್ಟುಬಂದು ದ್ರುಪದರಾಜನ ಮೇಲೆ ಬಿದ್ದರು; ಅವರನ್ನೆಲ್ಲ ಭೀಮನೂ ಅರ್ಜುನನೂ ಸದೆಬಡಿದು ಹಿಮ್ಮೆಟ್ಟಿಸಿದರು. ಹೀಗೆ ಯಾಜ್ಞಸೇನಿಯಾದ ದ್ರೌಪದಿಯನ್ನು ಪಡೆದುಕೊಂಡು ತಾವಿಳಿದುಕೊಂಡಿದ್ದ ಕುಂಬಾರನ ಮನೆಗೆ ಹಿಂದಿರುಗಿ ತಮ್ಮ ತಾಯಿ ಕುಂತಿಯನ್ನು ಕೂಗಿ "ಭಿಕ್ಷೆ ತಂದಿದ್ದೇವೆ" ಎಂದರು. ಆಕೆ ಒಳಗೇ ಇದ್ದವಳು ಈ ಮಾತಿನ ಅರ್ಥವನ್ನರಿಯದೆ, ಹುಡುಗಿಯನ್ನೂ ನೋಡದೆ, "ನೀವೈವರೂ ಸಮನಾಗಿ ಹಂಚಿಕೊಳ್ಳಿ !" ಎಂದಳು. ಅನಂತರ ಹೊರಗೆ ಬಂದು ದ್ರೌಪದಿಯನ್ನು ನೋಡಿದಮೇಲೆ ತಾನಾಡಿದ ಮಾತು ಅನುಚಿತವೆಂದು ಅರಿತುಕೊಂಡಳು; ತನ್ನಿಂದ ಇಂಥ ಸೂಚನೆ ಬಂದಿತೆಂದು ಮರುಗಿದಳು.

ಆದರೆ ಧರ್ಮರಾಜನು ಕುಂತಿಯನ್ನು ಸಮಾಧಾನಗೊಳಿಸಿ ಅರ್ಜುನನೇ ಅವಳನ್ನು ಸ್ವಯಂವರದಲ್ಲಿ ಗೆದ್ದವನಾದ್ದರಿಂದ ಅವನೇ ಅವಳನ್ನು ವಿಧಿವತ್ತಾಗಿ ಮದುವೆಯಾಗಬೇಕೆಂದು ಹೇಳಿದನು. ಅರ್ಜುನನು. ಅದಕ್ಕೆ ಒಪ್ಪದೆ, ತಾಯಿಯ ಮಾತಿನಂತೆ ತಾವೈವರೂ ಅವಳನ್ನು ಮದುವೆಯಾಗಬೇಕೆಂದು ವಾದಿಸಿದನು. ಹೀಗೆ ಮಾತುಕತೆ ನಡೆಯುತ್ತಿರುವ ವೇಳೆಗೆ ಕೃಷ್ಣನು ಬಲರಾಮನೊಡಗೂಡಿ ಅಲ್ಲಿಗೆ ಬಂದನು; ಅವನಿಗೆ ಪಾಂಡವರ ಪತ್ತೆಯಾಗಿದ್ದಿತು.

ಆದರೆ ದ್ರುಪದರಾಜನಿಗೆ ತನ್ನ ಮಗಳನ್ನು ಸ್ವಯಂವರ

ದಲ್ಲಿ ಪಡೆದು ಹೋದವನು ಯಾರೆಂಬುದು ತಿಳಿದಿರಲಿಲ್ಲ. ಅನಂತರ ತಿಳಿದಾಗ ವಿಧಿವತ್ತಾಗಿ ವಿವಾಹವನ್ನು ನೆರವೇರಿಸಲೆಂದು ಕುಂಬಾರನ ಮನೆಗೆ ಬಂಗಾರದ ರಥಗಳನ್ನು ಕಳುಹಿಸಿ ಪಾಂಡವಸೋದರರನ್ನೂ ಕುಂತಿಯನ್ನೂ ತನ್ನ ಅರಮನೆಗೆ ಕರೆಯಿಸಿಕೊಂಡನು. ಪಾಂಡವರೊಂದಿಗೆ ಸಂಬಂಧ ಬೆಳೆಸುವ ಅವಕಾಶ ಒದಗಿದುದು ಅವನಿಗೆ ತುಂಬ ಸಂತೋಷವನ್ನು ತಂದಿತು ; ಆದರೆ ಕುಂತಿಯು ಮಾತಿನಂತೆ ಅವರೈವರೂ ದ್ರೌಪದಿಯನ್ನು ಮದುವೆಯಾಗಬೇಕಾದ ಪರಿಸ್ಥಿತಿಯನ್ನು ಅರಿತು ಅವನಿಗೆ ಆತಂಕವಾಯಿತು. ಆ ವೇಳೆಗೆ ಸರಿಯಾಗಿ ವ್ಯಾಸರು ಅಲ್ಲಿಗೆ ಬಂದು ಪಾಂಡವರ ಮತ್ತು ದ್ರೌಪದಿಯ ಪೂರ್ವವೃತ್ತಾಂತವನ್ನೆಲ್ಲ ತಿಳಿಯಪಡಿಸಿದ ಮೇಲೆ, ಪಾಂಡವರು ಮೊದಲು ಇಂದ್ರರಾಗಿದ್ದವರೆಂದೂ ದ್ರೌಪದಿಯು ದೇವಮಾಯೆಯೆಂದೂ ತಿಳಿದು ದ್ರುಪದ ರಾಜನು ಆಶ್ಚರ್ಯ-ಆನಂದ ಎರಡನ್ನೂ ಒಟ್ಟಿಗೆ ಅನುಭವಿಸಿದನು.

ವ್ಯಾಸರು ತಿಳಿಸಿದಂತೆ, ದ್ರೌಪದಿಯು ಹಿಂದಿನ ಜನ್ಮದಲ್ಲಿ ಯಾವನೋ ಋಷಿಯ ಮಗಳಾಗಿದ್ದು, ಬಹುಕಾಲದವರೆಗೆ ತನಗೆ ಅನುರೂಪನಾದ ಗಂಡನನ್ನು ಕಾಣದೆ ಈಶ್ವರನನ್ನು ಕುರಿತು ತಪಸ್ಸು ಮಾಡಿದಳು. ಈಶ್ವರನು ಪ್ರಸನ್ನನಾಗಲು "ಎಲ್ಲ ಗುಣಗಳನ್ನೂ ಪಡೆದ ಗಂಡನನ್ನು ಕರುಣಿಸು" ಎಂದು ಬೇಡಿಕೊಂಡಳು. "ಹಾಗಾದರೆ ನಿನಗೆ ಐವರು ಗಂಡಂದಿರಾಗುವರು, ಎಲ್ಲ ಗುಣಗಳನ್ನೂ ಪಡೆದ ಒಬ್ಬನು ದುರ್ಲಭ" ಎಂದು ವರವನ್ನು ಕೊಟ್ಟು ಈಶ್ವರನು ಮರೆಯಾದನು. ಮುಂದೆ ಈ ಋಷಿಕನ್ಯೆಯು ಘೋರವಾದ ತಪಸ್ಸನ್ನು ಆಚರಿಸಿ ದೇಹತ್ಯಾಗ ಮಾಡಿ ದ್ರುಪದರಾಜನ ಯಜ್ಞಕುರಡ

ದಿಂದ ಹೊರಬಂದಳು. ದಿಟವಾಗಿ ಇವಳು ದೇವರೂಪಿಣಿ, ಸ್ವರ್ಗಶ್ರೀ.

ಹೀಗೆ ವಿವರಗಳು ತಿಳಿದಮೇಲೆ ದ್ರುಪದರಾಜನು ನೆಮ್ಮದಿಯಿಂದ ಪಾಂಡವರ ಮತ್ತು ದ್ರೌಪದಿಯ ವಿವಾಹ ಮಂಗಳವನ್ನು ವಿಧ್ಯುಕ್ತವಾಗಿ, ವೈಭವದಿಂದ ಬೆಳೆಸಿದನು. ಹಸೆಕರಗದಲ್ಲಿ ದ್ರೌಪದಿಯು ಸ್ವಯಂವರಕ್ಕೆ ವೀರಕುಮಾರ ರೊಡಗೂಡಿ ಹೊರಡುವುದನ್ನೂ, ಹೂವಿನ ಕರಗದಲ್ಲಿ ದ್ರೌಪದಿ–ಅರ್ಜುನರ ಕಲ್ಯಾಣೋತ್ಸವ, ಭೀಮನ ನೆರವಿನಿಂದ ರಥೋತ್ಸವ ಇವುಗಳನ್ನೂ ನೆನಪಿಗೆ ತರುವುದೆಂದು ಹೇಳು ತ್ತಾರೆ.

ಇನ್ನೊಂದು ಪ್ರಸಂಗ, ಮಹಾಭಾರತ ಯುದ್ಧವೆಲ್ಲ ಮುಗಿದು, ಪಾಂಡವರಿಗೆ ಪಟ್ಟವಾದ ಮೇಲೆ, ಅವರ ಆಳ್ವಿಕೆಯೂ ಕೊನೆಗೊಂಡು ಅವರೆಲ್ಲ ಸ್ವರ್ಗದ ಕಡೆ ಹೊರಡುತ್ತಾರೆ. ಅವರ ಆಯುಸ್ಸು ಮುಗಿಯುತ್ತ ಬರುತ್ತದೆ. ಒಬ್ಬೊಬ್ಬರಾಗಿ ಸಾಯುತ್ತಾರೆ; ಉಳಿದವರು ಮುಂದೆ ಸಾಗುತ್ತಾರೆ. ಇವರಲ್ಲಿ ಮೊದಲು ನಿಶ್ಚೇತನಳಾಗಿ ಕೆಳಗೆ ಬಿದ್ದವಳು ದ್ರೌಪದಿ. ಅವಳು ತೀರಿಕೊಂಡಳೆಂದು ತಿಳಿದು ಪಾಂಡವರು ಅವಳ ಕಳೇಬರವನ್ನಲ್ಲಿಯೇ ಬಿಟ್ಟು ಮುಂದೆ ಸಾಗುತ್ತಾರೆ, ಆದರೆ ದ್ರೌಪದಿ ಇನ್ನೂ ಸತ್ತಿರುವುದಿಲ್ಲ, ದಣಿವಿನಿಂದ ಅವಳಿಗೆ ಅರಿವು ತಪ್ಪಿರುತ್ತದೆ ಅಷ್ಟೆ ಮತ್ತೆ ಎಚ್ಚೆತ್ತು ನಿಲ್ಲುತ್ತಾಳೆ. ಅಷ್ಟು ಹೊತ್ತಿಗಾಗಲೇ ಪಾಂಡವರು ತುಂಬ ದೂರ ಸಾಗಿರುತ್ತಾರೆ. ತಿಮಿರಾಸುರನೆಂಬ ರಾಕ್ಷಸನು ಏಕಾಕಿನಿಯಾಗಿರುವ ಈ ಸುಂದರಿಯನ್ನು ನೋಡಿ ಅವಳನ್ನು ಒಲಿಸಿಕೊಳ್ಳಲೆತ್ನಿಸುತ್ತಾನೆ.

ಆಗ ದ್ರೌಪದಿಯು ಸಿಟ್ಟಿಗೆದ್ದು ಆದಿಶಕ್ತಿಯ ಆಕಾರ

ವನ್ನು ಧರಿಸಿ ಆ ರಾಕ್ಷಸನನ್ನು ಕೊಲ್ಲುತ್ತಾಳೆ. ಅವಳ ಈ ಉಗ್ರಾವತಾರದ ಸಮಯದಲ್ಲಿ ಅವಳ ನೆರವಿಗೆಂದು ಕಾಣಿಸಿಕೊಂಡವರೇ ಗೌಡ, ಗಣಾಚಾರಿ, ವೀರಕುಮಾರರು. ತಿಮಿರ ಎಂದರೆ ಕತ್ತಲೆ. ಕತ್ತಲೆಯೇ ರಾಕ್ಷಸನಂತೆ ಮೇಲಡರಿ ಬಂದಾಗ, ಕತ್ತಲೆಯನ್ನು ಕೊನೆಗಾಣಿಸಿ ಬೆಳಕನ್ನು ಹರಿಸುವುದೇ ದೇವಕಾರ್ಯ. ಆದ್ದರಿಂದ ಕರಗ ಹೊರಡುವುದು ನಡುರಾತ್ರಿಯಲ್ಲೇ. ಗ್ರಾಮ ಸಂಚಾರ ಮಾಡಿ ಅಡಗಿರುವ ದುಷ್ಟ ಶಕ್ತಿಗಳನ್ನೆಲ್ಲ ದಮನಮಾಡಿ ಸ್ವಸ್ಥಾನಕ್ಕೆ ಹಿಂದಿರುಗುವ ವೇಳೆಗೆ ಸೂರ್ಯೋದಯ.

## ಧರ್ಮರಾಯನ ಗುಡಿ

ಹಲಸೂರು ಪೇಟೆಯ ಗುಡಿ ತುಂಬ ಹಿಂದಿನದೆಂದು ಈಗಾಗಲೇ ಹೇಳಿದೆಯಷ್ಟೇ. ಮೊದಲಿಗೆ ಗುಡಿ ಹೇಗಿದ್ದಿತೋ ಊಹಿಸಿಕೊಳ್ಳುವುದು ಕಷ್ಟ. ಅತಿ ಪ್ರಾಚೀನವೆನ್ನಬಹುದಾದ ಛಾಯಾಚಿತ್ರವೊಂದಿದೆ ಗುಡಿಯದು ; ಅದನ್ನು ನೋಡಿದರೆ ಅದು ಒಂದೇ ಅಂಕಣದ ಕಟ್ಟೆಯ ಮೇಲೆ ನಿಂತ ಗುಡಿಯಂತೆ ಕಾಣುತ್ತದೆ. ಗರ್ಭಗುಡಿಯ ಮೇಲೆ ಚೋಳಶೈಲಿಯ ಗಾರೆ ಗಚ್ಚಿನ ವಿಮಾನವಿದೆ. ಕಟ್ಟೆಯನ್ನೇರಿ ಹೋಗಲು ಅಳವಡಿಸಿದ ಮೆಟ್ಟಲುಗಳ ಎರಡೂ ಕಡೆ ಎರಡು ಕಲ್ಲಿನ ಆನೆಗಳಿವೆ. ಆವರಣ ಬಯಲಾಗಿದೆ. ಆದರೆ ಈಗ ಆವರಣವನ್ನು ಪ್ರಾಕಾರದಿಂದ ಖಚಿತಗೊಳಿಸಿದ್ದಾರೆ. ತಲೆಬಾಗಿಲ ಮೇಲೆ ಸೊಗಸಾದ ಗೋಪುರವಿದೆ. ಮಹಾದ್ವಾರದ ಎಡಗಡೆ ಮುತ್ಯಾಲಮ್ಮನ ಗುಡಿ, ಬಲಗಡೆ ಗಣಪತಿಯ ಗುಡಿ. ಮೊದಲು ಮುತ್ಯಾಲಮ್ಮನ ಗುಡಿ ದೂರ, ಬಿಡಿಯಾಗಿ ಇದ್ದಿತಂತೆ. ಮುತ್ಯಾಲಮ್ಮ ಗ್ರಾಮದೇವತೆ, ಅದಕ್ಕೂ ಧರ್ಮರಾಜನ ಗುಡಿಗೂ

ನೆಂಟೇನೂ ಇರಲಿಲ್ಲ. ಆದರೆ ಮಹಾದ್ವಾರ ಗೋಪುರವನ್ನು ಕಟ್ಟಿ, ಆವರಣದ ಗೋಡೆಯನ್ನು ಸಿದ್ಧಪಡಿಸುವಾಗ ಮುತ್ಯಾಲಮ್ಮನೂ ಈ ಗುಡಿಗೆ ಸೇರಿಹೋದಳು. ಕೆಲವು ಊರುಗಳಲ್ಲಿ ಕರಗ ಮುತ್ಯಾಲಮ್ಮನಿಗೇ ನಡೆಯುವುದುಂಟು, ಆಕೆ ಸಿಡುಬುರೋಗದ ದೈವ, ತೆಲುಗು ಹಿನ್ನೆಲೆಯುವಳು. ಇವಳ ಗುಡಿಯ ಮೇಲೂ ಸಣ್ಣದಾದ ಗೋಪುರವಿದೆ. ಗಣಪತಿಯ ಗುಡಿಯಲ್ಲೇ ನವಗ್ರಹಗಳನ್ನೂ ಅಳವಡಿಸಿದ್ದಾರೆ.

ಗರ್ಭಗುಡಿ ಸುಮಾರಾಗಿ ದೊಡ್ಡದಾಗಿಯೇ ಇದೆ; ಅದಕ್ಕೊಂದು ಮುಖಮಂಟಪವೂ ಇದೆ. ಗರ್ಭಗುಡಿಯಲ್ಲಿ ಪ್ರಧಾನವಾದ ತಾಣವೆಂದರೆ ಶ ಕ್ತಿ ಪೀ ಠ. ಕೆಳಗೆ ಚಕ್ರವೊಂದನ್ನು ಸ್ಥಾಪಿಸಿ, ಮೇಲೆ ಶಿಲಾಪಟ್ಟಿಕೆಯನ್ನಿರಿಸಿದ್ದಾರೆನ್ನುತ್ತಾರೆ. ಅದರ ಮೇಲೇ ಕರಗವನ್ನು ಕೂರಿಸುವುದು. ವಿಶೇಷವಾದ ಪೂಜೆ ನಡೆಯುವುದು ಈ ಪೀಠಕ್ಕೇ. ಪೀಠದ ಹಿಂಭಾಗದಲ್ಲಿ ತಟ್ಟನೆ ಕಣ್ಣಿಗೆ ಬೀಳುವುದು ಧ ರ್ಮ ರಾ ಯ ನ ಮೂರ್ತಿ. ಪಕ್ಕದಲ್ಲಿ ಕೃಷ್ಣನೂ ಇದ್ದಾನೆ. ದ್ರೌಪದಿ–ಅರ್ಜುನರ ಜೋಡಿ ಮೂರ್ತಿಗಳೂ ಇವೆ, ದ್ರೌಪದಿ ದಕ್ಷಿಣ ಶೈಲಿಯ ದೇವೀ ಮೂರ್ತಿಗಳಂತೆಯೇ ಇದ್ದಾಳೆ, ಅರ್ಜುನ ಧನುರ್ಧರಣ ಭಂಗಿಯಲ್ಲಿದ್ದಾನೆ. ಇವಲ್ಲದೆ ತೀರ ಹಳೆಯವೆನ್ನುವ ಪಂಚಪಾಂಡವರ ಮರದ ಮೂರ್ತಿಗಳೂ ಸ್ವಾರಸ್ಯವಾದುವು. ಗದೆಯನ್ನು ಹಿಡಿದು ವೀರಾಸನದಲ್ಲಿ ಮಂಡಿಯೂರಿ ಕುಳಿತ ಭೀಮನ ಪುತ್ಥಳಿ ಸೊಗಸಾಗಿದೆ. ಪಾಂಡವ ವೀರರು, ದ್ರೌಪದಿ ಮಾತ್ರವಲ್ಲದೆ ಕುಂತಿ, ಮಾದ್ರಿ, ಸುಭದ್ರೆ ಇವರ ಗೊಂಬೆಗಳೂ ಇಲ್ಲಿ ಸೇರಿವೆ.

ಇಲ್ಲಿನ ವಿಶೇಷ ದೈವವೆಂದರೆ ಪೋತರಾಜ. ಇವನು ಧರ್ಮರಾಯನ ತಂಗಿ ಶಂಖೋದರಿಯ (ಅಥವಾ ಶಂಖ

ವಲ್ಲಿಯ) ಗಂಡನೆಂದೂ, ಪಾಂಡವ ಸೇನೆಯ ನಿರ್ವಾಹಕನೆಂದೂ ಹೇಳುತ್ತಾರೆ. ಶೈವಸಂಪ್ರದಾಯದ ಆರಾಧನೆಯಲ್ಲಿ ಗಣಪತಿಗೆ, ಮತ್ತು ವೈಷ್ಣವ ಸಂಪ್ರದಾಯದ ಆರಾಧನೆಯಲ್ಲಿ ವಿಷ್ವಕ್ಸೇನನಿಗೆ ಇರುವ ಸ್ಥಾನ ಇಲ್ಲಿ ಪೋತರಾಜನಿಗೆ. ಅವನ ಸಮಕ್ಷಮದಲ್ಲಿಯೇ ಎಲ್ಲವೂ ನಡೆಯಬೇಕು. ಪೋತರಾಜನ ಉತ್ಸವ ಮೂರ್ತಿ ಸೊಗಸಾದ ಶಿಲ್ಪಕೃತಿ. ಬಲಗೈಯಲ್ಲಿ ಕತ್ತಿಯನ್ನು ಹಿರಿದು, ಎಡಗೈಯಲ್ಲಿ ಪೋತ ಮೃಗವನ್ನು (ಎಂದರೆ ಎಳೆಯ ಪ್ರಾಣಿ, ಕುರಿಮರಿ) ಹಿಡಿದು, ಮಂಡಿಯೂರಿ ವೀರಾಸನದಲ್ಲಿ ಕುಳಿತ ಈ ಮೂರ್ತಿ ಭವ್ಯವಾಗಿದೆ. ಕರಗದ ಮೊದಲು ವಿಶೇಷವಾದ ಪೂಜೆಯೇನು ಈ ವೀರನಿಗೆ ನಡೆಯದಿದ್ದರೂ, ಕರಗದ ಮರುದಿನ ಪೋತರಾಜನನ್ನು ಮೆರವಣಿಗೆಯಲ್ಲಿ 'ಏಳು ಸುತ್ತಿನ ಕೋಟೆ'ಗೆ ಕೊಂಡೊಯ್ದು, ಅಲ್ಲಿಂದ ಮತ್ತೆ ಗುಡಿಗೆ ತಂದು ಅವನೆದುರು 'ಗಾವು ಹಿಡಿಯುವ' ವಿಧಿಯನ್ನು ನಡೆಸುತ್ತಾರೆ. ಇದರ ವಿವರ ಮುಂದೆ ಬರುತ್ತದೆ.

ಧರ್ಮರಾಯನ ಗುಡಿಯೆಂದು ಹೆಸರಾದರೂ ಇಲ್ಲಿ ಪೂಜೆಗೊಳ್ಳುವ ಮುಖ್ಯ ದೈವ ದ್ರೌಪದಿ, ಅಥವಾ ಆದಿಶಕ್ತಿ. ಈಕೆಯೇ ಕರಗಶಕ್ತಿ. ಆದರೆ ರಥವೇರಿ ಹೊರಡುವವರು ದ್ರೌಪದಿ-ಅರ್ಜುನರು, ಕರಗದ ಅಂಗವಾಗಿ ನಡೆಯುವ ಕಲ್ಯಾಣೋತ್ಸವ ಇವರಿಬ್ಬರದ್ದೇ. ಐವರು ಪಾಂಡವರೂ ದ್ರೌಪದಿಯನ್ನು ವರಿಸಿದರೂ, ಸ್ವಯಂವರದಲ್ಲಿ ಅವಳನ್ನು ಪಡೆದವನು ಅರ್ಜುನನೇ. ವರ್ಷಕ್ಕೊಮ್ಮೆ ಭೀಮನಿಗೂ ವಿಶೇಷವಾದ ಪೂಜೆ ಸಲ್ಲುವುದುಂಟು.

ಕಿಲಾರಿ ರಸ್ತೆಯಲ್ಲಿರುವ ಧರ್ಮರಾಯಸ್ವಾಮಿ ಗುಡಿಯಲ್ಲಿ ಶಕ್ತಿಪೀಠದ ಮೇಲೆ ತಾಮ್ರದ ಕಲಶವೊಂದನ್ನೇ ಇರಿಸಿ

ರುತ್ತಾರೆ. ಇದೇ ಇಲ್ಲಿನ ಕರಗಶಕ್ತಿ. ಎಡಭಾಗದಲ್ಲಿ ಸಾಕಾರ ಶಕ್ತಿಯ ಸನ್ನಿಧಿಯೂ, ಬಲಭಾಗದಲ್ಲಿ ಅನಂತಶಯನನ ಸನ್ನಿಧಿಯೂ ಇವೆ. ಶಕ್ತಿಪೀಠದ ಹಿಂಬದಿಯಲ್ಲಿ ಧರ್ಮರಾಯ ಮತ್ತು ಕೃಷ್ಣ ಇದ್ದಾರೆ. ಪಂಚಲೋಹದ ಸೊಗಸಾದ ಶಕ್ತಿಯ ಪುತ್ಥಳಿ ಇಲ್ಲಿರುವುದು ಈಚಿನದು. ಈ ಗುಡಿಯಲ್ಲಿ ಕರಗವನ್ನು ನಡೆಸುವವರು ಗೊಲ್ಲರು. ಇಲ್ಲಿ ಕರಗದ ಮೊದಲು ಶಂಖ-ಚಕ್ರಗಳನ್ನು ಭಕ್ತರ ಮನೆಗಳಿಗೆ ಕೊಂಡೊಯ್ದು ಪೂಜಿಸುವ ಪದ್ಧತಿಯಿದೆ. ಈ ಗುಡಿಯ ಆವರಣದಲ್ಲಿ ಶಿವಾಲಯ, ಹನುಮಂತನ ಸನ್ನಿಧಿ ಮತ್ತು ನವಗ್ರಹ ಮಂಟಪಗಳಿವೆ.

## ಕರಗಶಕ್ತಿ ಯಾರು ?

ಕರಗವೆನ್ನುವ ಉತ್ಸವ ಶಕ್ತಿಯ ಆರಾಧನೆಯೇ ; ಕರಗದ ಸಂಚಾರ ಈ ಶಕ್ತಿಯ ಸಂಚಲನೆಯೇ. ಎಂದಮೇಲೆ, ಶಾಕ್ತಸಂಪ್ರದಾಯದ ಹಲವಾರು ವಿವರಗಳು ಇಲ್ಲಿ ಸೇರಿಬಂದಿದ್ದರೆ ಸೋಜಿಗವಲ್ಲ. ಕರಗದಲ್ಲಿ ಎದ್ದುಕಾಣುವ ವಿವರ ಅದರ ರಹಸ್ಯ. ಕರಗವೆಂದರೆ ಏನು ಎಂಬುದು ಯಾರಿಗೂ ತಿಳಿಯದು. ಗಣಾಚಾರಿ, ಕರಗ-ಪೂಜಾರಿ, ದುರ್ಗಾ-ಪೂಜಾರಿ ಈ ಮೂವರನ್ನು ಬಿಟ್ಟರೆ ಬೇರೆ ಯಾರೂ ಅದನ್ನು ಕಣ್ಣಿಂದ ಕಾಣಲಾರರು. ಅದರ ಆಕಾರವನ್ನಾಗಲೀ ವಿವರಗಳನ್ನಾಗಲೀ ತಿಳಿಯಲಾರರು ಕರಗವನ್ನು ಅಲಂಕರಿಸುವುದು, ಅದರಲ್ಲಿ ಪ್ರಾಣಶಕ್ತಿಯನ್ನು ತುಂಬುವುದು, ಅದನ್ನು ವಿಸರ್ಜಿಸುವುದು ಇವೆಲ್ಲ ನಡೆಯುವಾಗ ಈ ಮೂವರು ಮಾತ್ರ ಇರುತ್ತಾರೆ; ಬೇರೆ ಅಧಿಕಾರಿಗಳಿಗಾಗಲೀ ವೀರಕುಮಾರರಿಗಾಗಲೀ ಕುಲದವರಿಗಾಗಲೀ ಪ್ರವೇಶವಿಲ್ಲ. ಕರಗವನ್ನು ಅಲಂಕರಿಸಿ ಅದನ್ನು

ಕೆಂಪುಬಟ್ಟೆಯಿಂದ ಹೊದಿಸಿಬಿಟ್ಟಾಗಲೇ ಹಸೆಕರಗದ ವಿಧಿ ವೀರಕುಮಾರರೆದುರು ಜರುಗುವುದು; ಗುಡಿಯಲ್ಲಿ ಕೆಂಪುಬಟ್ಟೆಯನ್ನು ತೆಗೆದು ಮಲ್ಲಿಗೆ ಹೂಗಳಿಂದ ಚೆನ್ನಾಗಿ ಮುಚ್ಚಿಬಿಟ್ಟಾಗಲೇ ಕರಗಸಂಚಾರ ಹೊರಡುವುದು. ಹೀಗಾಗಿ ಕರಗದ ಮೂಲಸ್ವರೂಪವೇನು ಎಂಬುದು ಆ ಮೂವರನ್ನು ಹೊರತಾಗಿ ಇತರರಿಗೆ ತಿಳಿಯುವ ಸಾಧ್ಯವಿಲ್ಲ. ಈ ಕರಗವನ್ನು ನಿರ್ಮಿಸುವ ಕುಂಬಾರನೂ ಇದನ್ನು ಗುಟ್ಟಾಗಿರಿಸುತ್ತಾನೆ. ತಾನು ಉಪವಾಸಮಾಡಿ, ಶುದ್ಧನಾಗಿದ್ದುಕೊಂಡು, ಪರಿಶುದ್ಧವಾದ ಮಣ್ಣನ್ನು ನೂರೆಂಟು ತೆಂಗಿನಕಾಯಿಗಳ ಎಳೆನೀರಿನಿಂದಲೇ ಕಲಸಿ ಭಕ್ತಿಯಿಂದ ಕರಗವನ್ನು ಮಾಡುತ್ತಾನೆ. ಇದೂ ಮನೆತನದಲ್ಲಿಯೇ ಬಂದ ಕೈಂಕರ್ಯ.

'ಕರಗ' ಎನ್ನುವ ಮಾತಾದರೂ ಹೇಗೆ ಬಂದಿತು ಎಂದು ನಿಖರವಾಗಿ ಹೇಳುವುದು ಸಾಧ್ಯವಿಲ್ಲ. ಬಹುಶಃ ಇದು ತಮಿಳು ಭಾಷೆಯ ಮಾತು. ಸಂಸ್ಕೃತದಲ್ಲಿ 'ಕರಕ'ವೆಂಬ ಪದವಿದೆ; 'ನೀರಿನ ಗಡಿಗೆ' ಎಂದರ್ಥ. 'ಕರ್ಕ' ಎಂಬ ಇನ್ನೊಂದು ಪದವೂ ಇದೆ; ಇದಕ್ಕೆ 'ನೀರಿನ ಗಡಿಗೆ'ಯೆಂದೂ ಬೆಂಕಿಯೆಂದೂ ಎರಡರ್ಥಗಳು. ಅಗ್ನಿಸಂಭೂತೆಯಾದ ದ್ರೌಪದಿಯನ್ನು ಪ್ರತಿನಿಧಿಸುವ ಕರಗದಲ್ಲಿ ಇವೆರಡೂ ಸಂಕೇತಗಳು ಸೇರಿವೆಯೆಂದು ತೋರುತ್ತದೆ. ದೇವಿಯನ್ನು ಗಡಿಗೆಯಲ್ಲಿ, ಕಲಶದಲ್ಲಿ ಆವಾಹನೆ ಮಾಡುವ ಪದ್ಧತಿಯೇನೋ ನಾಡಿನಲ್ಲೆಲ್ಲ ಬಳಕೆಯಲ್ಲಿದೆ. ಕಲಶಪೂಜೆಯೆನ್ನುವುದು ವೈದಿಕ ಸಂಸ್ಕಾರಗಳಲ್ಲಿಯೂ ಬರುವ ವಿಧಿಯೇ. ಆದರೆ ಇಲ್ಲಿನ ಕರಗ ಗಡಿಗೆಯೆಂದು ಖಚಿತವಾಗಿ ಹೇಳುವುದಾಗದು. ಕರಗಗಳಲ್ಲಿ ಶಿವಕರಗ, ಅಗ್ನಿಕರಗ ಮೊದಲಾದ ಬಗೆಗಳೂ ಉಂಟೆಂದು ಹೇಳುತ್ತಾರೆ. ಇಲ್ಲಿ ನಡೆಯುವುದು

ಶಿವಕರಗ. ಅಗ್ನಿಕರಗವಾದರೆ ಕೆಂಡದ ಹೊಂಡದಲ್ಲಿ ನಡೆದಾಡುವ ವಿಧಿಯಿರುತ್ತದೆ; ಇಲ್ಲಿ ಈ ವಿಧಿಯಿರದು.

ಮೊದಲಿಗೆ ಕರಗವೆಂದರೆ ಗಡಿಗೆಯೇ ಇದ್ದಿರಬಹುದು; ಬೆಂಕಿಯನ್ನು ನೊಂದದಂತೆ ಇರಿಸಿಕೊಳ್ಳುವ, ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯುವ ಸಾಧನ. ಮೀನಾಕ್ಷಿಯಂತೆ ದ್ರೌಪದಿಯೂ ಯಜ್ಞಕುಂಡದಿಂದ ಹೊರಹೊಮ್ಮಿ ಬಂದವಳಾಗಿ ಅಗ್ನಿದೇವತೆಯೇ, ವನ್ನಿಯರು ಅಗ್ನಿವಂಶದವರೇ. ಬೆಂಕಿಯನ್ನು ಇರಿಸಿಕೊಳ್ಳುವ ಗಡಿಗೆಯನ್ನೇ ಬೆಂಕಿಯೆಂದು ಬಗೆದು ಪೂಜಿಸುವ ಪದ್ಧತಿ ಹಲವೆಡೆ ಇದೆ. ಉರಿಯುವ ಬೆಂಕಿಯೇ ಲಿಂಗವಾಯಿತಷ್ಟೆ, ಅದೇ ದೇವಿಗೂ ಆಸರೆ. ಕತ್ತಲಲ್ಲಿ ಬೆಳಕು ಕೊಡುವುದು, ಮಲಗಿದ್ದಾಗ ದುಷ್ಟಪ್ರಾಣಿಗಳನ್ನು ದೂರವಿರಿಸುವುದು. ಚಳಿಗಾಲದಲ್ಲಿ ಕಾವನ್ನು ಕೊಡುವುದು, ಹಸಿದಾಗ ಅಡುಗೆಯನ್ನು ಒದಗಿಸುವುದು, ಆಯುಧವನ್ನು ಹರಿತಗೊಳಿಸುವುದು, ಪಾತ್ರೆ ಪಡಗಗಳನ್ನು ಸಿದ್ಧಪಡಿಸಲು ನೆರವಾಗುವುದು ಬೆಂಕಿಯೇ. ಬೆಂಕಿಯೇ ದೈವವೆಂದು ಪ್ರಾಚೀನರು ಎಣಿಸಿದರು. ಆದರೆ ಕಾಪಾಡುವುದಷ್ಟೇ ಅದರ ಕೆಲಸವಲ್ಲ: ಅದು ಕಾಡುವುದೂ ಉಂಟು. ದೂರವಿದ್ದರೆ ಹಿತವಾದ ಕಾವು, ಹತ್ತಿರ ಬಂದರೆ ಉರಿ; ಸೋಂಕಿದರೆ ಸುಡುವುದು. ಅದನ್ನು ಜೋಪಾನವಾಗಿ ಕಾಣದಿದ್ದರೆ ಕೆಡುಕು ತಪ್ಪಿದ್ದಲ್ಲ. ಹೊರಗಿನ ಉರಿಯಲ್ಲದೆ, ಆ ದೈವ ಮುನಿಸಿದರೆ ಮೈಯುರಿಯೂ ಮೂಡಿಕೊಳ್ಳುವುದು. ರೋಗದ ಬೇಗೆ, ಮನಸ್ಸಿನ ಬೇಗುದಿ ಇವೂ ಅಗ್ನಿದೇವತೆಯ ಕೈವಾಡಗಳೇ. ಕಾಪಿಡುವಾಗ ಅವಳು 'ಅಮ್ಮ,' ಕಾಡುವಾಗ 'ಮಾರಿ'.

ಅವಳನ್ನು ತಣಿಸುವ ಹೊಂಚಿಕೆಯೇ ಅವಳ ಆರಾಧನೆ

ಗಳಲ್ಲಿ ಮುಖ್ಯವಾಗಿ ಬರುವ ವಿವರ. ಕರಗದಲ್ಲಿ ಇದನ್ನು ಕಾಣುತ್ತೇವೆ. ಬೇಸಿಗೆಯ ಬೇಗೆಯಲ್ಲಿ ಅಚ್ಚಮಲ್ಲಿಗೆ ಹೂಗಳು ತಂಪು. ಕರಗದ ಮೇಲೆ ಅವನ್ನು ಅಳವಡಿಸುವಾಗ ಮಲ್ಲಿಗೆ ಮೊಗ್ಗುಗಳನ್ನು ಬೆಣ್ಣೆಯೊಳಗೆ ನೆನೆಹಾಕಿ ಅನಂತರ ಕಟ್ಟು ವರು. ಅವಳ ಧಗೆಯನ್ನು ಹೀಗೆ ತಣ್ಣಗಾದ ಹೂಗಳಿಂದ ತಣಿಸಿ, ಅವಳನ್ನು ಪ್ರತಿನಿಧಿಸುವ ಕರಗವನ್ನು ತಲೆಯಮೇಲೆ ಹೊತ್ತು, ಊರೆಲ್ಲ ಸುತ್ತಿಸಿ, ಪೂಜೆ ಸಲ್ಲಿಸುತ್ತಾರೆ. ಕರಗ ವೆಂದರೆ ಆದಿಶಕ್ತಿಗಾಗಿ ನಡೆಸುವ ಶಾಂತಿಕ್ರಿಯೆ.

ಇದರಲ್ಲಿ ಒಂದು ಉಗ್ರ ಹಿನ್ನೆಲೆಯನ್ನೂ ಸೂಚಿಸು ವುದಿದೆ. ಮಹಾಭಾರತ ಯುದ್ಧದ ಬಿರುಸಿನಲ್ಲಿ ಒಮ್ಮೆ ದ್ರೌಪ ದಿಯು ಸಿಟ್ಟಿಗೆದ್ದು ಭಯಂಕರಾಕಾರವನ್ನು ಧರಿಸಿ ಕುರು ಕ್ಷೇತ್ರವನ್ನು ಸುಡುಗಾಡು ಮಾಡಿ, ಕೈಯಲ್ಲಿ ತಲೆಯೋಡೆ ಗಳನ್ನು ಹಿಡಿದು ಚೆಂಡಾಡುತ್ತ, ಹೆಣಗಳ ಮೇಲೆ ಕುಣಿ ದಾಡುತ್ತ ವಿಕಟಾಟ್ಟಹಾಸದಲ್ಲಿದ್ದುದನ್ನು ಕೃಷ್ಣಾರ್ಜುನರು ಕಂಡರು. ಆಗ ಅವಳನ್ನು ತಣಿಸುವ ಉಪಾಯವನ್ನು ಕೃಷ್ಣನು ತಿಳಿಸಿದನು. ಪಂಚಪಾಂಡವರು ಆಕೆಯನ್ನು ಪೂಜಿಸಿದರು. ಈ 'ಕುರುಕ್ಷೇತ್ರ ಕಪಾಲಿನಿ'ಯ ಆರಾಧನೆಯೇ ಕರಗವೆಂದು ಹೇಳುತ್ತಾರೆ.

ಈಕೆಯ ಹಿರಿಮೆ ಲೋಕಕ್ಕೆ ಪ್ರಕಟವಾದುದು ಕೃಷ್ಣ ನಿಂದ ಎಂದು ಆಕೆಯ ಸನ್ನಿಧಿಯಲ್ಲೇ ಕೃಷ್ಣನನ್ನೂ ಇರಿಸ ಲಾಗಿದೆ. ಆಕೆಯ ಪೂಜೆಯಲ್ಲಿ ವೈಷ್ಣವ ಪ್ರಕ್ರಿಯೆ ಒದಗಿ ಬಂದಿದೆ. ದುರ್ಗೆಯನ್ನು ವೈಷ್ಣವೀಶಕ್ತಿಯೆಂದು ಕರೆಯು ವುದು ಹೊಸತೇನಲ್ಲ. 'ವಿಷ್ಣುಮಾಯೆ'ಯೆಂದು ಹೆಸರಾದ ಏಕಾನಂಶೆ ಕೃಷ್ಣನನ್ನು ಕಾಪಾಡಲೆಂದೇ ಯಶೋದೆಯ ಬಸುರಿನಿಂದ ಹೊರಬಂದವಳೆಂದು 'ಹರಿವಂಶ'ದ ಒಕ್ಕಣೆ.

ಹಲವು ಕ್ಷೇತ್ರಗಳಲ್ಲಿ ಶಕ್ತಿ–ಕೃಷ್ಣರ ಸೇರ್ಪಡೆಯನ್ನು ಕಾಣಬಹುದು. ಪ್ರಸಿದ್ಧವಾದ ನಿದರ್ಶನವೆಂದರೆ ಪುರಿ–ಜಗನ್ನಾಥದ ದೇವರುಗಳು. ಅಲ್ಲಿ ಒಂದೇ ಪೀಠದ ಮೇಲೆ ಕೃಷ್ಣ, ಸುಭದ್ರೆ (ಏಕಾನಂಶೆ), ಬಲಭದ್ರರಿದ್ದಾರೆ. ಏಕಾನಂಶೆಯೂ ಕೃಷ್ಣನಂತೆ ಕರಿಯ ದೈವವೇ; ಹಾಗೆಂದೇ ಅವಳು 'ಕೃಷ್ಣೆ'. ಕರಗಕ್ಕೂ ವೈಷ್ಣವಾಗಮಕ್ಕೂ ನಂಟು ಮೂಡಿದುದು ಹೀಗೆ.

## ಕರಗದ ವಿವರಗಳು

ಕರಗ ಒಂಬತ್ತು ದಿನಗಳ (ದಿಟವಾಗಿ, ರಾತ್ರಿಗಳ) ಉತ್ಸವ. ಇದೊಂದು ನವರಾತ್ರೋತ್ಸವವೇ; ವಸಂತನವರಾತ್ರಿ ಎನ್ನಬಹುದು. ಹೊಸವರ್ಷದ ಮೊದಲ ತಿಂಗಳು, ಚೈತ್ರಮಾಸದ ಶುಕ್ಲಪಕ್ಷದಲ್ಲಿ ಸಪ್ತಮಿಯ ರಾತ್ರಿ ಹಲಸೂರು ಪೇಟೆ ಧರ್ಮರಾಯಸ್ವಾಮಿ ಗುಡಿಯಲ್ಲಿ ಕರಗದ ಉತ್ಸವ ಮೊದಲಾಗುತ್ತದೆ. ಅಂದೇ ನಡುರಾತ್ರಿಯ ವೇಳೆ 'ಧ್ವಜಾರೋಹಣ'. ಊರಲ್ಲಿ, ಗುಡಿಯಲ್ಲಿ ನಡೆಯುವ ಯಾವುದೇ ಉತ್ಸವಕ್ಕೂ ಧ್ವಜಾರೋಹಣ ಮೊಟ್ಟಮೊದಲ ಕಟ್ಟಳೆ. ಅಲ್ಲಿಂದ ಮುಂದೆ ಉತ್ಸವದ ಬಿರುಸು, ಸಡಗರ ಮೊದಲಾಗುತ್ತವೆ.

ಈ ಗುಡಿಯಲ್ಲಿ ಬೇರೆ ಗುಡಿಗಳಲ್ಲಿರುವಂತೆ ಸ್ಥಿರವಾದ ಕಲ್ಲಿನ ಧ್ವಜಸ್ತಂಭವಿಲ್ಲ. ಪ್ರತಿವರ್ಷವೂ ಕರಗದ ಸಮಯದಲ್ಲಿ ಹೊಸ ಧ್ವಜಸ್ತಂಭವನ್ನು ನೆಡುತ್ತಾರೆ; ಉತ್ಸವ ಮುಗಿದೊಡನೆ ತೆಗೆದುಬಿಡುತ್ತಾರೆ. ಇಲ್ಲಿನ ಧ್ವಜಸ್ತಂಭವೂ ವಿಶಿಷ್ಟವಾದುದು. ಅದು ನೂರೆಂಟು ಗೆಣ್ಣುಗಳಿರುವ ಉದ್ದನೆಯ ಬಿದಿರುಕಂಬ. ಮೊದಲಿಗೆ ಈ ಉದ್ದೇಶಕ್ಕಾಗಿಯೇ



ಧರ್ಮರಾಯನ ಗುಡಿ



ಕರಗದ ಮುಂದೆ ವೀರಕುಮಾರರು

ಕರಗದ ಸುತ್ತ ನೆರದ ವೀರಕುಮಾರು

ವೀರಕುಮಾರರಿಂದ ಅಲುಗುಸೇವೆ

ವೀರಕುಮಾರರಿಂದ ಅಲಗುಸೇವೆ





ಸಂಚಾರಕ್ಕೆ ಹೊರಟ ಕರಗ

ಅಲಗುಸೇವೆ

ಅಲಗುಸೇವೆ

ವೀರಕುಮಾರರ ಮೆರವಣಿಗೆ



ಕರಗವನ್ನು ದುರ್ಗಾಪೂಜಾರಿ ಹೊರಡಿಸಿಕೊಂಡು ಬರುವುದು

ಧರ್ಮರಾಯನ ತೇರು

ಧರ್ಮರಾಯನ ತೇರು



ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲಿ ತೇರುಗಳು

ಬೆಂಗಳೂರಿನ ಬನಶಂಕರಿ ಗುಡಿಯೆದುರು ಸಾರಕ್ಕಿ ಕಾಡಿನಲ್ಲಿ ಕೆಲವು ಬಿದಿರು ಮೆಳೆಗಳನ್ನು ಬೆಳೆಸುತ್ತಿದ್ದರಂತೆ. ಅಲ್ಲಿನ ಕಾಡೆಲ್ಲ ಊರಾಗತೊಡಗಿದಾಗ, ಬನ್ನೇರಘಟ್ಟದ ಕಾಡಿನಲ್ಲಿ ಇಂಥ ಬಿದಿರನ್ನು ಬೆಳೆಸಲಾರಂಭಿಸಿದರು. ಈಚೆಗೆ, ಆ ಕಾಡಿನಲ್ಲಿ ನೂರೆಂಟು ಗೆಣ್ಣುಗಳಿರುವ ಬಿದಿರು ಕಂಭವೊಂದನ್ನು ಹುಡುಕಿ ಮೊದಲೇ ಗುರುತುಮಾಡಿಟ್ಟುಕೊಳ್ಳುತ್ತಾರೆ. ಕರಗದ ಉತ್ಸವ ಮೊದಲಾಗುವ ದಿನ ಅದನ್ನು ಗುಡಿಗೆ ಹೊತ್ತು ತರುತ್ತಾರೆ. ನೂರೆಂಟು ಗೆಣ್ಣುಗಳಿರುವ ಒಂದೇ ಕಂಬ ಸಿಗದಿದ್ದಾಗ, ಅಂಕಿಯನ್ನು ಪೂರೈಸಲು ಬೇರೊಂದು ಬಿದಿರುಕಂಬವನ್ನು ಜೋಡಿಸುತ್ತಾರೆ. ಕಡೆಯ ಪಕ್ಷ ಮೂವತ್ತಮೂರು ಗೆಣ್ಣುಗಳಾದರೂ ಇರಬೇಕಂತೆ. ಹಿಂದಿನಿಂದಲೂ ಈ ಕೈಂಕರ್ಯ ಮಾಡುವವರು ಜರಗನಹಳ್ಳಿಯ ಜನರು.

ಅದನ್ನು ಗುಡಿಗೆ ತಂದಮೇಲೆ, ಕುಲ ಪುರೋಹಿತರೂ ದುರ್ಗಾ–ಪೂಜಾರಿಯೂ ಸೇರಿ ಅದನ್ನುಹಾಲು–ನೀರುಗಳಿಂದ ತೊಳೆದು, ಕುಂಕುಮ–ಗಂಧ–ಪುಷ್ಪಗಳಿಂದ ಪೂಜಿಸಿ, ರಾತ್ರಿ ಚಂದ್ರ ಬಾನಿನಲ್ಲಿ ಕಾಣಿಸಿಕೊಂಡಾಗ ಅದನ್ನೆತ್ತಲಾರಂಭಿಸಿ ನಡುರಾತ್ರಿಯ ವೇಳೆಗೆ ನಿಲ್ಲಿಸುತ್ತಾರೆ. ಕೆಳಭಾಗದಲ್ಲಿ ಬಂಗಾರವನ್ನು ಸೋಕಿಸಿ ನಡುವೆ ಕಂಕಣ–ಯಜ್ಞೋಪವೀತಗಳನ್ನು ಕಟ್ಟಿ, ಮೇಲ್ಭಾಗದಲ್ಲಿ ಅರಿಶಿನ ಬಟ್ಟೆಯನ್ನು ಧ್ವಜದಂತೆ ಕಟ್ಟಿರುತ್ತಾರೆ. ಉತ್ಸವ ಮುಗಿದನಂತರ ಈ ಧ್ವಜಸ್ತಂಭವು ಕರಗ–ಪೂಜಾರಿಗೆ ಸೇರುತ್ತದೆ.

ಕರಗ ನಡೆಯುವುದಕ್ಕೆ ಏಳೆಂಟು ದಿನಗಳ ಮೊದಲೇ ವೀರಕುಮಾರರಿಗೆ ದೀಕ್ಷೆಕೊಡುವ ವಿಧಿ ಪುರೋಹಿತರು, ಗಣಾಚಾರಿ, ದುರ್ಗಾ–ಪೂಜಾರಿಗಳ ಸಮ್ಮುಖದಲ್ಲಿ ನಡೆಯು

ತ್ತದೆ. ವಿಧಿಯಂತೆ ವ್ರತ ಹಿಡಿದವರೇ ದೇವಿಯ ಮುಂದೆ ಅಲಗುಸೇವೆ ಮಾಡಬಲ್ಲರು. ಉಳಿದವರು ವೀರಕುಮಾರ ರಂತೆ ಸರಿಗೆಪೇಟ, ಬಿಳಿಚಲ್ಲಣ, ನಡುವಿಗೆ ಕೆಂಪುವಸ್ತ್ರ, ಕೊರಳಲ್ಲಿ ಹೂಮಾಲೆ, ಹಣೆಯ ಮೇಲೆ ತ್ರಿಪುಂಡ್ರಗಳನ್ನು ಧರಿಸಿದ್ದರೂ ಅಲಗುಸೇವೆ ಮಾಡುವಂತಿಲ್ಲ. ಅಲಗು ಸೇವೆಯೆಂದರೆ ದೇವಿಯೆದುರು ನಿಂತು ಬಲಗೈ ಕತ್ತಿಯಿಂದ ಬಲಎದೆ ಮತ್ತು ಬಲಭುಜದ ಮೇಲೆ ಮೂರು ಬಾರಿ, ಎಡಎದೆ ಮತ್ತು ಎಡಭುಜದ ಮೇಲೆ ಮೂರು ಬಾರಿ, ಮತ್ತೆ ಬಲಎದೆ, ಬಲಭುಜದ ಮೇಲೆ–ಹೀಗೆ ಹೊಡೆದುಕೊಳ್ಳುವ ವಿಧಿ. ಅವರು ಹೊಡೆದುಕೊಳ್ಳುವಾಗ "ಧಿಕ್ ಧಿಕ್ ಧೀ" ಎಂದು ಕೂಗುವರು. ವ್ರತವನ್ನು ಹಿಡಿಯುವ ಸಮಯದಲ್ಲಿ ಕತ್ತಿಯನ್ನು ಹಿಡಿದುಕೊಳ್ಳುವ ಬಗೆ, ಅದನ್ನೆತ್ತಿ ಮೈಮೇಲೆ ಇಳಿಸುವ ಹದ ಎಲ್ಲವನ್ನೂ ಹಿರಿಯರಿಂದ ದುರ್ಗಾ–ಪೂಜಾರಿಯು ತಿಳಿಯಪಡಿಸುವನು. ಸೇವೆಗೆ ಮೊದಲು ಗಣಾಚಾರಿಯ ಮನೆಯಲ್ಲಿ ವೀರಕುಮಾರರೆಲ್ಲರಿಗೆ ಸನ್ಮಾನ ನಡೆದು ಅವರ ಎದೆಗೆ ಭಂಡಾರದ ಲೇಪನಕ್ರಿಯೆ ಜರುಗುತ್ತದೆ. ವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಅಲಗುಸೇವೆಯಿಂದ ಗಾಸಿಯಾಗದೆಂದು ನಂಬಿಕೆಯಿದೆ. ಶಕ್ತಿಯ ಆವೇಶ ಮೈಮೇಲೆ ಮೂಡುವುದೇ ಉದ್ದೇಶ.

ವ್ರತವನ್ನು ಹಿಡಿಯುವಾಗ ವೀರಕುಮಾರರ ಬಲಗೈಗೆ ದೋರಕಂಕಣ ಬಂಧನ (ಅರಿಶಿನದ ಕೊಂಬನ್ನು ಕಟ್ಟಿದ ದಾರದಿಂದ ಕಂಕಣ ಕಟ್ಟುವುದು) ನಡೆಯುತ್ತದೆ. ಅರಿಶಿನದ ಕೊಂಬನ್ನು ಬೆಂಕಿಯ ಮೇಲಿಟ್ಟು ಅದರ ತುದಿಯನ್ನು ವ್ರತ ಹಿಡಿಯುವವರ ನಾಲಿಗೆಯ ಮೇಲೆ ಮುಟ್ಟಿಸುತ್ತಾರೆ. ಇದೊಂದು ಶುದ್ಧೀಕರಣ ವಿಧಿ. ಅವರಿಗೆ ಜನಿವಾರವನ್ನೂ

ತೊಡಿಸುವರು. ಅಂದಿನಿಂದ ಅವರು ಒಂಬತ್ತು ದಿನಗಳು ದಿನವೂ ತಣ್ಣೀರಲ್ಲಿ ಮಿಂದು, ಮಡಿಯುಟ್ಟು ಗುಡಿಗೆ ಬಂದು ಪೂಜೆ ಸಲ್ಲಿಸಿ, ತೀರ್ಥಪ್ರಸಾದ ಸ್ವೀಕರಿಸಿದ ಮೇಲೆ ಮನೆಗೆ ಹಿಂದಿರುಗುತ್ತಾರೆ. ಮನೆಗಳಲ್ಲಿ ಎಲ್ಲರೂ ಸ್ನಾನಮಾಡಿಯೇ ಅಡುಗೆ ಮಾಡುವರು.ಹೊಸಪಾತ್ರೆಗಳನ್ನು ಬಳಸಬೇಕೆಂದೂ, ಚಾಪೆಯ ಮೇಲೇ ಮಲಗಬೇಕೆಂದೂ, ಹಾಲು-ಹಣ್ಣು ಮೊದಲಾದ ಸಾತ್ತ್ವಿಕಾಹಾರವನ್ನೇ ಸೇವಿಸಬೇಕೆಂದೂ, ಮನೆಯಲ್ಲದೆ ಬೇರೆಲ್ಲಿಯೂ ಏನನ್ನೂ ಉಣ್ಣಬಾರದೆಂದೂ ನಿಯಮಗಳಿವೆ. ವ್ರತಹಿಡಿದ ವೀರಕುಮಾರರು (ಇವರನ್ನು ಕೋಮಾರಮಕ್ಕಳೆಂದೂ ಕರೆಯುತ್ತಾರೆ.) ದೇವಿಯ ಪರಿವಾರವೆಂದೂ, ಆಕೆಯ ಸೇವೆಗೆ ಮುಡಿಪಾದವರೆಂದೂ ನಂಬಿಕೆ. ಇವರೆಲ್ಲ ಈ ಕುಲದವರೇ ಆಗಿರಬೇಕು.

ಒಂದು ಬಾರಿ ದೀಕ್ಷೆ ತಳೆದಮೇಲೆ ಅವರು ವರ್ಷ ವರ್ಷವೂ ಮತ್ತೆ ಮತ್ತೆ ಹೊಸದಾಗಿ ವ್ರತಹಿಡಿಯುವ ಆಗತ್ಯವಿಲ್ಲ ; ಅದು ಅವರು ಬದುಕಿರುವವರೆಗೂ ನಡೆಯುತ್ತದೆ. ಆದರೆ ಪ್ರತಿವರ್ಷವೂ ಹಲವರು ಹೊಸದಾಗಿ ವೀರಕುಮಾರರಾಗುತ್ತಾರೆ ; ಇಂಥವರಿಗೆ ದೀಕ್ಷೆ ಆಗಬೇಕು. ಕರಗದ ಉತ್ಸವಗಳಲ್ಲಿ ಸುಮಾರು ಮುನ್ನೂರು ಮಂದಿ ವೀರಕುಮಾರರಿರುತ್ತಾರೆ. ಕರಗದ ಸುತ್ತ ಹೊಳೆಯುವ ಕತ್ತಿ ಝಳಪಿಸುತ್ತಾ, "ಗ್ರೋವಿಂದಾ!" ಎಂದು ಕೂಗುತ್ತಾ ಕರಗ – ಪೂಜಾರಿಗೆ ದಾರಿ ಮಾಡಿಕೊಡುತ್ತಾ ಅವರು ವೀರಾವೇಶದಿಂದ ಬರುವುದು ಕರಗದ ಉತ್ಸವಕ್ಕೆ ಕಳೆಯೇರಿಸುತ್ತದೆ.

ಕರಗದ ಒಂಬತ್ತು ದಿನಗಳೂ ಬೆಳಿಗ್ಗೆ ವೀರಕುಮಾರರು, ಕರಗ-ಪೂಜಾರಿ, ದುರ್ಗಾ-ಪೂಜಾರಿ, ಗಣಾಚಾರಿ ಇವರು ಮೆರವಣಿಗೆಯಲ್ಲಿ ನಡೆದೇ ಹೊರಟು ಒಂಬತ್ತು ಕೊಳಗಳಲ್ಲಿ

ಮಿಂದು ಗುಡಿಗೆ ಬರಬೇಕೆಂಬ ಕಟ್ಟಳೆಯಿದೆ. ಅವರು ಮೆರವಣಿಗೆಯಲ್ಲಿ ಹೊರಡುವಾಗ, ಛತ್ರಿ, ತ್ರಿಶೂಲ, ಪೂಜೆಯ ದೇವತಾಮೂರ್ತಿಗಳು, ವಾಲೆಭಂಡಾರ, ಪಂಚನಿಶಾನೆಯೆಲ್ಲವನ್ನೂ ಕೊಂಡೊಯ್ಯುವರು. ಮೊದಲ ದಿನದ ಸ್ನಾನ 'ಕರಗದ ಕುಂಟೆ'ಯಲ್ಲಿ. ಇದು ಕಬ್ಬನ್ ಪಾರ್ಕಿನಲ್ಲಿ ಶೇಷಾದ್ರಿ ಅಯ್ಯರ್ ಸ್ಮಾರಕ ಭವನವಾದ ಗ್ರಂಥಭಂಡಾರಕ್ಕೆ ಹೋಗುವ ದಾರಿಯಲ್ಲಿ ಬಲಗಡೆಯಿದೆ. ಈ ಕುಂಟೆಯಲ್ಲಿ ಮೂರು ದಿನಗಳ ಸ್ನಾನ ನಡೆಯುತ್ತದೆ. ಉಳಿದ ದಿನಗಳು ಸಂಪಂಗಿರಾಮನಗರದ ಯಲ್ಲಮ್ಮನ ಗುಡಿಯ ಬಳಿ 'ಕೋತಿ ಕುಂಟೆ', ಈಗಿನ ಸುದಾಮನಗರದಲ್ಲಿರುವ ಮುನೀಶ್ವರನ ಗುಡಿ ಬಾವಿ, ಕೆಂಪಾಂಬುಧಿ ಕೆರೆ, ಧರ್ಮಾಂಬುಧಿ ಕೆರೆ (ಈಗ ಅಣ್ಣಮ್ಮನ ಗುಡಿಯ ಹತ್ತಿರದ ಬಾವಿ), ಕಲಾಸಿ ಪಾಳ್ಯದ ಮರಿಸ್ವಾಮಯ್ಯನವರ ಮಠದ ಬಾವಿ ಈ ಸ್ಥಳಗಳಲ್ಲಿ ಮೀಯುವರು.

ಒಂಬತ್ತು ದಿನಗಳೂ ಕರಗ-ಪೂಜಾರಿ ಮಟ್ಟಿಗೆ ಗುಡಿಯಲ್ಲೇ ಇರುವನು. ಅವನು ತುಂಬ ನೇಮದಿಂದ ಇರಬೇಕು. ಅವನು ಮನೆಬಿಟ್ಟು ದೇವಿಯ ಪೂಜೆಗೆ ಮೀಸಲಾಗಿರುವನೆಂದು ಸೂಚಿಸಲು ಅವನ ಹೆಂಡತಿಗೆ 'ತಾಲಿ ತಿರುವುಹಾಕುವ' ವಿಧಿ ನಡೆಯುತ್ತದೆ. ಎಂದರೆ ಆಕೆ ವಿಧವೆಯಾದಳೆಂದು ಸಂಕೇತ. ಕರಗದ ಉತ್ಸವ ನಡೆದ ಮೇಲೆ ದುರ್ಗಾ-ಪೂಜಾರಿಯು ಕರಗ-ಪೂಜಾರಿ ಅವನ ಹೆಂಡತಿ ಇಬ್ಬರಿಗೂ ಮತ್ತೆ ಮದುವೆ ಶಾಸ್ತ್ರಮಾಡಿ ತಾಳಿಯನ್ನು ತಿರುಗಿ ಕಟ್ಟುತ್ತಾನೆ. ಪೂಜಾರಿಯು ಗಡ್ಡ ಮೀಸೆಗಳನ್ನು ತೆಗಿಸಿ ದೀಕ್ಷೆ ತೊಡಿಸುತ್ತಾನೆ. ಒಂಬತ್ತು ದಿನಗಳೂ ಕರಗ-ಪೂಜಾರಿ ಹಾಲು-ಖಿಲಕ್ಕಿ ಇಷ್ಟಲ್ಲದೆ ಉಪವಾಸದಲ್ಲೇ ಇರುತ್ತಾನೆ ; ಗುಡಿಯ ಹೊರಗೆ

ಸ್ನಾನಕ್ಕಲ್ಲದೆ ಬೇರೆ ಎಲ್ಲಿಯೂ ಹೋಗುವಂತಿಲ್ಲ. ಗುಡಿಯ ವ್ಯವಸ್ಥೆಯಲ್ಲಿ ಇಬ್ಬರು ಪೂಜಾರಿಗಳಿರುತ್ತಾರೆ; ವರ್ಷದಲ್ಲಿ ಒಬ್ಬನಂತೆ ಸರದಿಯಂತೆ ಕರಗವನ್ನು ಹೊರುವರು. ಸಂದರ್ಭಾನುಸಾರ ಸರದಿಯಲ್ಲಿ ಮಾರ್ಪಾಟಾಗುವುದೂ ಉಂಟು. ಕರಗದಲ್ಲಿ ಏನಾದರೂ ಅನಾನುಕೂಲವಾದರೆ, ಇದು ಪೂಜಾರಿಯ ನೇಮ ತಪ್ಪಿದ್ದರಿಂದ ಎಂದು ನಂಬಿಕೆಯಿರುವುದರಿಂದ ಪೂಜಾರಿ ತುಂಬ ಜಾಗರೂಕನಾಗಿರುತ್ತಾನೆ.

## ಹಸೆಕರಗ

ಧ್ವಜಾರೋಹಣವಾದಮೇಲೆ ಮುಖ್ಯವಾದ ವಿಧಿಯೆಂದರೆ ಐದನೆಯ ದಿನ, ಎಂದರೆ ದ್ವಾದಶಿಯಂದು, ನಡೆಯುವ 'ಆರತಿ ದೀಪ', ಇದು ಹೆಂಗಸರ ಸಡಗರ. ಮಡಿಯುಟ್ಟು, ಬೆಲ್ಲ–ಹಿಟ್ಟಿನ (ತಂಬಿಟ್ಟಿನ) ಹಣತೆಗಳಲ್ಲಿ ತುಪ್ಪದ ದೀಪವನ್ನು ಹೊತ್ತಿಸಿ, ಅದನ್ನು ಬಗೆ ಬಗೆಯಾಗಿ ಸಿಂಗರಿಸಿದ ಮಂಟಪಗಳಲ್ಲಿರಿಸಿಕೊಂಡು ಗುಡಿಗೆ ತರುತ್ತಾರೆ. ನಡುರಾತ್ರಿಯಲ್ಲಿ ಹೊರಟು ಮನೆಮನೆಗಳಿಂದೆಲ್ಲ ತಂದ ಈ ದೀಪಗಳು ಗುಡಿಯಲ್ಲಿ ಸೇರುವ ವೇಳೆಗೆ ರಾತ್ರಿ ಎರಡು ಗಂಟೆಯಾಗುತ್ತದೆ. ಗುಡಿಯಲ್ಲಿ ದೀಪಾರಾಧನೆಯಾದ ಮೇಲೆ, ಬೆಳಗಿನ ಜಾವ ಮೂರುಗಂಟೆ ಸುಮಾರಿಗೆ ಈ ದೀಪಾರತಿಗಳ ಮೆರವಣಿಗೆ ಗುಡಿಯಿಂದ ಹೊರಟು ಅಲ್ಲಲ್ಲಿ ಮೆರೆದು ಸೂರ್ಯೋದಯದ ಸಮಯಕ್ಕೆ ಗುಡಿಗೆ ಹಿಂದಿರುಗುತ್ತದೆ.

ಇದಾದ ಮರುರಾತ್ರಿ 'ಹಸೆಕರಗ'. ಇದನ್ನು 'ಹಸಿಕರಗ'ವೆಂದೂ ಕರೆಯುವುದುಂಟು. ಈ ಮಾತಿನ ಅರ್ಥ ಸ್ಪಷ್ಟವಾಗಿಲ್ಲ. ಕರಗದ ಮೂಲಾಕೃತಿಯನ್ನು ಆ ಹೊತ್ತೇ ಮಾಡಿರುವುದರಿಂದ ಅದು 'ಹಸಿ' ಯೆಂದು ಅರ್ಥ ಹೇಳುತ್ತಾರೆ. ಈ

ಕರಗವನ್ನು ಕೂರಿಸುವೆಡೆ ಮಂಡಲವೊಂದು (ಹಸೆ) ಇರುವುದರಿಂದಲೂ, ಆದರ ಮುಂದೆ ವೀರಕುಮಾರರು ಕತ್ತಿಗಳನ್ನು ಹಸೆಯಂತೆ ಜೋಡಿಸುವುದರಿಂದಲೂ 'ಹಸೆಕರಗ'ವೆಂದಿರಬಹುದು. ಹೆಸರು ಮೂಡಿದಾಗ ಅರ್ಥ ಏನಿದ್ದಿತೋ ತಿಳಿಯುವುದಿಲ್ಲ. 'ಹಸೆ', 'ಹಸಿ' ಎಂಬೆರಡೂ ಪದಗಳು ಕರಗದ ವಿಚಾರವಾಗಿ ಬಳಕೆಯಲ್ಲಿವೆ ಜನರ ಆಡುಮಾತಿನಲ್ಲಿ 'ಹಸೆ' 'ಹಸಿ'ಯಾಗುವುದೂ, 'ಹಸಿ' 'ಹಸೆ' ಯಾಗುವುದೂ ಉಂಟು. ಅರ್ಥ ಏನಾದರಿರಲಿ, ಇದು ಮೊದಲ ಕರಗ, ಇದಾದ ಮೇಲೆ ಊರಸುತ್ತ ಸಂಚಾರಕ್ಕೆ ಬರುವ ಕರಗ 'ಹೂವಿನ ಕರಗ'ವೆಂದು ಹೆಸರು ತಳೆದಿದೆ. ಕೆಲವು ಕಡೆ (ನಿದರ್ಶನಕ್ಕೆ ಕಿಲಾರಿರಸ್ತೆಯ ಗುಡಿಯಲ್ಲಿ) ಈ ಮೊದಲ ಕರಗವನ್ನಷ್ಟೇ ನಡೆಸುವ ಪದ್ಧತಿಯಿದೆ.

ಹಲಸೂರುಪೇಟೆಯ (ಎಂದರೆ ಈಗ ನಾವು ವಿವರಿಸುತ್ತಿರುವ) ಗುಡಿಯ ಹಸೆಕರಗ ನಡೆಯುವುದು ಗುಡಿಗೆ ಸ್ವಲ್ಪದೂರ ಇರುವ ಸಂಪಂಗಿಕೆರೆಯ ಅಂಗಳದಲ್ಲಿ. ಬೆಳೆಯುತ್ತಿದ್ದ ಬೆಂಗಳೂರಿನ ಜನಕ್ಕೆ ನೀರನ್ನು ಒದಗಿಸಲು ಇಮ್ಮಡಿ ಕೆಂಪೇಗೌಡನ ಕಾಲದಲ್ಲಿ ಸಂಪಂಗಿಕೆರೆಯನ್ನು ಕಟ್ಟಿಸಲಾಯಿತು. ಈಗ ಕೆರೆಯ ಬಹುಭಾಗವನ್ನು ಬತ್ತಿಸಿ, ಕಂಠೀರವ ಸ್ಟೇಡಿಯಂ ನಿರ್ಮಾಣವಾಗಿದೆ. ಈ ಕೆರೆಯ ಅಂಚಿನಲ್ಲೇ ನಿರ್ದಿಷ್ಟವಾದ ಒಂದೆಡೆ ಹಸೆಕರಗ ನಡೆಯುತ್ತದೆ. ಇದು ನಡೆಯುವುದು ತ್ರಯೋದಶಿಯ ರಾತ್ರಿ (ಎಂದರೆ ಧ್ವಜಾರೋಹಣವಾಗಿ ಆರನೆಯ ದಿನ) ಮೂರು ಗಂಟೆಯ ಸುಮಾರಿಗೆ.

ಅಂಗಳವನ್ನು ಗುಡಿಸಿ, ಸಾರಿಸಿ, ಶುದ್ಧಿಮಾಡಿ, ರಂಗೋಲಿ ಚಿತ್ರಗಳಿಂದ ಅಲಂಕರಿಸುತ್ತಾರೆ. ಆದರಡಿ 'ಸರ್ವ

ಶಕ್ತ್ಯಾಕರ್ಷಣಿ'ಯೆಂಬ ಯಂತ್ರವನ್ನು ಸ್ಥಾಪಿಸಿದ್ದಾರೆಂದು ಪ್ರತೀತಿಯಿದೆ. ಅಲ್ಲಿ ಒಂದು ಗುಡಾರವನ್ನು ಹಾಕಿ, ಅದರೊಳಗೆ ಆ ವೇಳೆಗಾಗಲೆ ಅಲ್ಲಿ ತಂದಿರಿಸಿದ ಕರಗವನ್ನು ಪೂಜಿಸುತ್ತಾರೆ. ಗುಡಾರದೊಳಗೆ ಗುಟ್ಟಾಗಿ ಕರಗದ ಮೂಲಾಕಾರವನ್ನು ತಂದಿರಿಸುವವರೂ, ಅಲ್ಲಿ ಇತರರಿಗೆ ಕಾಣದಂತೆ ಪೂರ್ವಪೂಜೆಗಳನ್ನೆಲ್ಲ ನಡೆಸುವವರೂ ಗಣಾಚಾರಿ, ದುರ್ಗಾ-ಪೂಜಾರಿ ಮತ್ತು ಕರಗ-ಪೂಜಾರಿ ಈ ಮೂವರು ಮಾತ್ರ. ಅವರು ಪೂಜೆಯನ್ನು ಮುಗಿಸಿದ ಮೇಲೆ ಕರಗಕ್ಕೆ ಕೆಂಪು ಬಟ್ಟೆಯನ್ನು ಮೂಲಾಕೃತಿಯೇನೂ ಕಾಣದಂತೆ ಹೊದಿಸಿ, ಮಲ್ಲಿಗೆಯ ಹಾರವನ್ನು ಹಾಕಿದ ಮೇಲೆ ಗುಡಾರವನ್ನು ತೆಗೆಯುತ್ತಾರೆ. ಕರಗದ ಮುಂದೆ ದೇವಿಯ ಆಯುಧವಾದ ಬಾಕು ಮತ್ತು ಮಂತ್ರದ ಬೆತ್ತ (ಬೆಳ್ಳಿ ಕಟ್ಟನೊಳಗೆ ಅಳವಡಿಸಿದ ನಾಗಬೆತ್ತ) ಇರುತ್ತದೆ. ಅನಂತರ ವೀರಕುಮಾರರ ಪೂಜೆ. ಸುಮಾರು ಮುನ್ನೂರು ಮಂದಿ ವೀರಕುಮಾರರು ಮಡಿಬಟ್ಟೆಗಳನ್ನುಟ್ಟು (—ಸರಿಗೆ ರುಮಾಲು, ಬಿಳಿಯ ಇಜಾರ, ಟೊಂಕಕ್ಕೆ ಕೆಂಪುವಸ್ತ್ರ—) ಹೂವು ಮುಡಿಸಿದ ಬಿಚ್ಚುಕತ್ತಿಗಳನ್ನು ಹಿಡಿದು ಈ ಕರಗದ ಮುಂದೆ ನೆರೆಯುವರು. ತಂತಮ್ಮ ಕತ್ತಿಗಳನ್ನು ಕರಗದೆದುರು ಅರ್ಧಚಂದ್ರಾಕೃತಿಯಲ್ಲಿ ನೆಲದ ಮೇಲೆ ಜೋಡಿಸುವರು. ಇದು ಕರಗಶಕ್ತಿಗೆ ಹಸೆಯಂತೆ ಕಾಣುತ್ತದೆ. ನೂರಾರು ಕತ್ತಿಗಳ ಈ ಜೊಡಣೆ ದಿಟವಾಗಿ ಒಂದು ಮಂಡಲವೇ, ಹಸೆಯೇ.

ಗಣಾಚಾರಿ, ಕರಗ-ಪೂಜಾರಿ, ದುರ್ಗಾ-ಪೂಜಾರಿ ಇವರು ಪೂಜೆ ಸಲ್ಲಿಸಿದನಂತರ ವೀರಕುಮಾರರೆಲ್ಲ ಒಟ್ಟಿಗೆ ಮೂರು ಬಾರಿ ದೇವತೆಯೆದುರು ಅಡ್ಡಬಿದ್ದು, ಭಕ್ತಿಯಿಂದಲೂ ಆವೇಶದಿಂದಲೂ ತಂತಮ್ಮ ಕತ್ತಿಗಳನ್ನೆತ್ತಿಕೊಳ್ಳುತ್ತಾರೆ.

ಎತ್ತಿಕೊಳ್ಳುವಾಗ "ಗೋವಿಂದಾ!" ಎಂಬ ಒಕ್ಕೊರಲಿನ ಕೂಗು ಬಾನನ್ನು ಅಡರುತ್ತದೆ. ಆಮೇಲೆ ಅವರಿಂದ ಅಲಗು ಸೇವೆ ನಡೆಯುವುದು. "ಢಿಕ್ ಢಿಕ್ ಢೀ" ಎಂದು ಕೂಗುತ್ತ ನೂರಾರು ಮಂದಿ ವೀರರು ಭಾವಾವೇಶದಿಂದ ಮೈಮರೆತು ತಮ್ಮ ಕತ್ತಿಯನ್ನು ತೂಗಾಡಿಸಿ ತಮ್ಮ ಮೈಮೇಲೆ ಇಳಿಸಿ ಕೊಳ್ಳುವ ನೋಟ ಯಾರಿಗಾದರೂ ಮೈನವಿರೇಳಿಸುತ್ತದೆ. ಇದಾದ ಮೇಲೆ ಕರಗ-ಪೂಜಾರಿ ಮಹಾಮಂಗಳಾರತಿ ಮಾಡಿ ಕರಗವನ್ನು ತನ್ನ ಬಗಲಿಗೆ ಎತ್ತಿಕೊಳ್ಳುತ್ತಾನೆ. ಆಗ ಕೆರೆ ಯಂಗಳದಲ್ಲಿ ಮಣಗಟ್ಟಳೆ ಉರಿಯುವ ಕರ್ಪೂರ ಸಂದ ರ್ಭದ ಸ್ವಾರಸ್ಯವನ್ನು ಹೆಚ್ಚಿಸುತ್ತದೆ.

ಈ ಪೂಜಾರಿಯನ್ನು ಆಗಲೇ ಮಲ್ಲಿಗೆ ಹೂಗಳಿಂದ ಅಲಂಕರಿಸಿರುತ್ತಾರೆ. ಅರಿಶಿನ ಬಣ್ಣದ ಸೀರೆಯನ್ನುಟ್ಟಿರು ತ್ತಾನೆ; ಬಳೆಗಳನ್ನು ತೊಟ್ಟಿರುವುದಿಲ್ಲ. ತಲೆಯ ತುಂಬ ಬಿಳಿ ಮಲ್ಲಿಗೆಯ ಹಾರಗಳ ಜಡೆಯಿರುತ್ತದೆ. ತೋಳುಗಳಿಗೆ ನಿಂಬೆ ಹಣ್ಣು ಕಟ್ಟಿದ ರಕ್ಷಾಬಂಧನವಿರುತ್ತದೆ. ಆ ಕಾಲದಲ್ಲಿ ಅವನು ಹೆಣ್ಣಂತೆಯೇ ಕಾಣಬೇಕೆಂಬ ಕಟ್ಟಳೆಯಿದೆ. ಕರಗ-ಪೂಜಾ ರಿಯೇ ದ್ರೌಪದಿಯೆಂದೂ ಅವನು ಹೊರುವ ಕರಗವೇ ಆದಿ ಶಕ್ತಿಯೆಂದೂ ಕಲ್ಪನೆ. ಹೀಗೆ ಅಲಂಕೃತನಾದ ಪೂಜಾರಿಯು ಕರಗವನ್ನೆತ್ತಿ ತನ್ನ ಸೊಂಟದ ಮೇಲೇರಿಸಿಕೊಳ್ಳುತ್ತಾನೆ. ಕರಗವು ಅಲ್ಲಿ ಸರಿಯಾಗಿ ಕೂರಲು 'ಮಡಿಕಟ್ಟುವ' ವಿಧಿ ನಡೆದಿರುತ್ತದೆ. ನೂರೆಂಟು ನಿಂಬೆಹಣ್ಣು, ಕೊಬ್ಬರಿಗಿಟಕು, ಕುಂಕುಮ, ಅರಿಶಿನ, ಬಾಚಣಿಗೆ, ಬಿಚ್ಚೋಲೆ ಮೊದಲಾದು ವನ್ನು ಉಡಿಗೆ ತುಂಬಿರುತ್ತಾರೆ. ಹೀಗೆ, ಕೆಂಪುಬಟ್ಟೆಯಿಂದ ಮುಚ್ಚಿದ ಹಸೆಕರಗವನ್ನು ಬಗಲಲ್ಲಿ ಹೊತ್ತು ಪೂಜಾರಿಯು ದೇವರ ಬಾಕು ಮತ್ತು ಮಂತ್ರದ ಬೆತ್ತಗಳನ್ನು ಹಿಡಿದು

ಕೆರೆಯಂಗಳದಿಂದ ಹೊರಡುವಾಗ ಕತ್ತಿ ಹಿರಿದ ವೀರ ಕುಮಾರರು ಜಯಘೋಷ ಮಾಡುತ್ತ ಮೆರೆವಣಿಗೆಯಲ್ಲಿ ಈ ಕರಗವನ್ನು ಒಯ್ಯುತ್ತಾರೆ.

ಹಸೆಕರಗವು ಪಂಜಿನ ಮೆರವಣಿಗೆಯಲ್ಲಿ ಅಲ್ಲಿಂದ ಹೊರಟು ಪುರಸಭೆ ಕಚೇರಿಯ ಪಕ್ಕದಲ್ಲೇ ಇರುವ 'ಏಳು ಸುತ್ತಿನ ಕೋಟೆ' (ಸಪ್ತಪ್ರಾಕಾರಪುರ) ಎಂಬ ಮಂಟಪಕ್ಕೆ ಬರುತ್ತದೆ. ಮೊದಲಿಗೆ ಅಲ್ಲಿ ದೊಡ್ಡ ಹಾವಿನ ಹುತ್ತವೊಂದಿದ್ದಿತೆಂದು ಹೇಳುತ್ತಾರೆ; ಒಂದು ಕಾಲಕ್ಕೆ ಅದು ಏಳು ಸುತ್ತುಗಳುಳ್ಳ ಕೋಟೆಯಾಗಿದ್ದಿತೆಂದೂ ನಂಬಿಕೆಯಿದೆ. ಈಗ ಬರಿಯ ಸಂಕೇತ ಸ್ಥಳವಾಗಿದೆ. ಇದೇ ದೇವಿಯ ತೌರೂರೆಂದು ನಂಬಿಕೆಯಿದೆ. ಇಲ್ಲಿಂದ ದೇವಿಯನ್ನು ಊರಿಗೆ ಮೂರು–ನಾಲ್ಕು ದಿನಗಳಿಗಾಗಿ ಕರೆಸಿಕೊಳ್ಳುವುದೇ ಉದ್ದೇಶ. ಇದನ್ನು ಕರಗವೂ ಪರಿವಾರವೂ ಒಂಬತ್ತು ಬಾರಿ ಸುತ್ತರಿಯುವಾಗ 'ಕೊರವಂಜಿ ನೃತ್ಯ' ನಡೆಯುತ್ತದೆ. ದುರ್ಗಾ–ಪೂಜಾರಿಯು ಗಂಟೆಬಾರಿಸುತ್ತ, ತಮಿಳು ಹಾಡುಗಳನ್ನು ಹೇಳುತ್ತ ಹಿಂದೆ ಹಿಂದೆ ಸರಿಯುತ್ತಿದ್ದರೆ ಕರಗ–ಪೂಜಾರಿಯು ಅವನೆದುರು ಅವನ ಹಾಡಿನ ಲಯಕ್ಕೆ ಸರಿಯಾಗಿ ಹೆಜ್ಜೆ ಇಡುತ್ತ ಮುಂದೆ ಮುಂದೆ ಕುಣಿಯುತ್ತ ಬರುತ್ತಾನೆ. ಸೂರ್ಯೋದಯಕ್ಕೆ ಮುಂಚೆ ಮೂರು ಗಂಟೆ ಸುಮಾರಿಗೆ, ಪಂಜಿನ ಬೆಳಕಲ್ಲಿ, ಹೊಳೆಯುವ ಕತ್ತಿಗಳ ನಡುವೆ, ನಡೆಯುವ ಈ ನೃತ್ಯ ರೋಮಾಂಚಕಾರಿಯಾದುದು. ದುರ್ಗಾ–ಪೂಜಾರಿಯು ದೇವಿಯನ್ನು ಬಗೆಬಗೆಯಾಗಿ ಆಹ್ವಾನಿಸುವುದು, ಕರಗ–ಪೂಜಾರಿಯು ದೇವಿಯ ಸಮ್ಮತಿಯನ್ನು ಸೂಚಿಸಿ ಅವನೊಂದಿಗೆ ಹೊರಟು ಬರುವುದು ಈ ನೃತ್ಯದ ತಾತ್ಪರ್ಯ. ಈ ನೃತ್ಯ ಮುಗಿದ ಮೇಲೆ ದುರ್ಗಾ–ಪೂಜಾ

ರಿಯು ಅಲ್ಲಿಯೇ ಹಸೆಕರಗಕ್ಕೆ ಮಂಗಳಾರತಿ ಮಾಡಿ, 'ಮಾಳಿ ಪೂಜೆ' (ಸಪ್ತಪ್ರಾಕಾರಪುರದ ದೇವತೆ ಮಾಳಿ) ನಡೆಸಿ, ತಳಿಗೆ ನೈವೇದ್ಯಗಳನ್ನು ಸಲ್ಲಿಸುತ್ತಾನೆ.

ಅನಂತರ ಹಸೆಕರಗವು ಧರ್ಮರಾಯನ ಗುಡಿಯ ಕಡೆ ಹೊರಡುತ್ತದೆ. ಗುಡಿಯನ್ನು ಮುಟ್ಟಿ, ಮುಂದಿನ ರಥವನ್ನು ಒಂಬತ್ತು ಬಾರಿ, ಬಲಿಪೀಠವನ್ನು ಒಂಬತ್ತು ಬಾರಿ, ಗುಡಿಯ ಆವರಣದಲ್ಲಿ ಗರ್ಭಗುಡಿಯನ್ನು ಒಂಬತ್ತು ಬಾರಿ ಪ್ರದಕ್ಷಿಣೆ ಮಾಡಿ, ಗರ್ಭಗುಡಿಯನ್ನು ಹೊಕ್ಕುತ್ತದೆ. ಎಡಗೈಯಲ್ಲಿ ಮಂತ್ರದ ಬೆತ್ತ, ಬಲಗೈಯಲ್ಲಿ ಬಾಕು, ಬಗಲಲ್ಲಿ ಹಸೆಕರಗ ಇವನ್ನು ಹೊತ್ತು ಹೆಣ್ಣು ವೇಷ ಧರಿಸಿದ ಕರಗ–ಪೂಜಾರಿಯೂ ದುರ್ಗಾ–ಪೂಜಾರಿಯೂ ಗಣಾಚಾರಿಯೂ ಗರ್ಭಗುಡಿಯೊಳಗೆ ಹೋಗಿ ಬಾಗಿಲು ಮುಚ್ಚಿಕೊಳ್ಳುತ್ತಾರೆ. ಉಳಿದವರೆಲ್ಲ ಮುಖಮಂಟಪದಲ್ಲಿಯೇ ನಿಲ್ಲುತ್ತಾರೆ. ಗರ್ಭಗುಡಿಯೊಳಗೆ ಕರಗ–ಪೂಜಾರಿಯ ಬಗಲಿಂದ ಹಸೆಕರಗವನ್ನು ತೆಗೆದು ಶಕ್ತಿ ಪೀಠದ ಮೇಲಿರಿಸಿ, ಮತ್ತೆ ಪೂಜೆ ಸಲ್ಲಿಸುತ್ತಾರೆ. ಇದು ಈ ಮೂವರು ಮಾತ್ರ ನಡೆಸುವ ಕೆಲಸ. ಇತರರು ಕಾಣಲಾರರು.

ದೇವಿಯನ್ನು ಕರಗದಲ್ಲಿ ಆ ದ ರ ದಿಂ ದ ಬರಮಾಡಿಕೊಂಡು ಗುಡಿಯೊಳಗೆ ಕರೆದುಕೊಂಡು ಬರುವುದೇ ಹಸೆ ಕರಗದ ಉದ್ದೇಶ. ಒಮ್ಮೊಮ್ಮೆ ಕರಗ–ಪೂಜಾರಿಯು ನಡೆ ಪ್ರತಿಕೂಲವಾಗಿ, ಮಂಡಿಯೂರಿ ಕುಳಿತೇ ಬಿಡುತ್ತಾನೆ. ಇದಕ್ಕೆ 'ಮೊಂಡಿ ಹಾಕುವುದು' ಎಂದು ಹೆಸರು. ದೇವಿಗೆ ಮುಂದೆ ಸಾಗುವ ಮನಸ್ಸಿಲ್ಲವೆಂದು ಇದರ ಅರ್ಥ. ಹಾಗಾದಾಗ, ವೀರಕುಮಾರರು ಮತ್ತೆ ಅಲಗುಸೇವೆ ನಡೆಸಿ ಕರಗ–ಪೂಜಾರಿಯನ್ನು ಎಬ್ಬಿಸಿ ಗುಡಿಯ ಕಡೆ ನಡೆಸಿಕೊಂಡು

ಬರುತ್ತಾರೆ. ಭಾವಾವೇಶದಲ್ಲಿ ನಡೆಯುವ ವಿಧಿಯಿದು; ಆತಂಕವನ್ನೂ ಶ್ರದ್ಧಾತಿಶಯವನ್ನೂ ಉಂಟುಮಾಡುವ ವಿಧಿ.

## ಹೂವಿನ ಕರಗ

ಇದು ಹುಣ್ಣಿಮೆಯ ನಡುರಾತ್ರಿ ನಡೆಯುವ ಉತ್ಸವ. ಇದಕ್ಕಾಗಿಯೇ ಕಾತರದಿಂದ ಜನ ನೆರೆದಿರುವುದು. ಕರಗದ ಸಂಭ್ರಮ, ಸಡಗರಗಳೆಲ್ಲ ಇದನ್ನು ಕುರಿತೇ. ಆ ದಿನ ಕರಗ–ಪೂಜಾರಿಗೆ ಎಣ್ಣೆಸ್ನಾನ ಆದ ಮೇಲೆ 'ಮಲ್ಲಾರ ಪೂಜೆ'ಯಲ್ಲಿ ಬಳೆಗಾರನಿಂದ ಸಂಪ್ರದಾಯದಂತೆ ಬಳೆತೊಡಿಸುವ ಶಾಸ್ತ್ರ ನಡೆಯುತ್ತದೆ. ಕರಗದ ಸಂದರ್ಭದಲ್ಲಿ ಈ ಪೂಜಾರಿಯು ಹೆಂಗಸೆಂದೇ ವ್ಯವಹಾರವೆಂದು ಈಗಾಗಲೇ ತಿಳಿಸಿದೆವಷ್ಟೆ. ಕರಗದ ದಿನವಂತೂ ಅವನ ಹೆಣ್ಣುವೇಷ ವಿಶೇಷವಾದುದು. ಕೈಗಳಿಗೆ ಕರಿಬಳೆ ತೊಡಿಸಿಯಾದ ಮೇಲೆ ಸ್ನಾನಮಾಡಿಕೊಂಡು ಶುದ್ಧನಾಗಿ ಬರುತ್ತಾನೆ. ಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂಜೆ, ಮೂಲದೇವತಾರಾಧನೆ, ಪಾಂಡವರ ಪೂಜೆಗಳು ನಡೆದು ಗಣಪತಿ ಮತ್ತು ನವಗ್ರಹ ಹೋಮ ನಡೆಯುತ್ತದೆ; ಅನಂತರ ದುರ್ಗಾ–ಪೂಜಾರಿಯಿಂದ ಬೀಜಾಕ್ಷರಗಳ ದೀಕ್ಷೆ ಜರುಗುತ್ತದೆ. ಅರಿಶಿನಬಣ್ಣದ ಸೀರೆ, ರವಿಕೆ, ಕೊರಳಲ್ಲಿ ಹವಳ, ಮುತ್ತು, ಕೆಂಪಿನ ಸರಗಳು, ಒಡ್ಯಾಣ, ದುಂಡುಮಲ್ಲಿಗೆ ಮೊಗ್ಗಿನ ಜಡೆಕುಚ್ಚು – ಕರಗ–ಪೂಜಾರಿ ಮದುವೆಗೆ ಸಿದ್ಧಳಾದ ಮದುಮಗಳಂತೆಯೇ ಕಾಣುತ್ತಾನೆ. ದೇವಿಯ ಅಂಶ ಅವನಲ್ಲಿ ಮೂಡಿಬಂದಿರುವುದೆಂಬ ಭಾವನೆಯಿದೆ. ಹೀಗೆ ಈ ಪೂಜಾರಿಯನ್ನು ಕರಗದ ಉತ್ಸವಕ್ಕೆ ಅಣಿಮಾಡಿ ಅಲಂಕರಿಸುವ ಉದ್ದೇಶದಿಂದ ಹುಣ್ಣಿಮೆ

ರಾತ್ರಿ ಹತ್ತು ಗಂಟೆಯ ಸುಮಾರಿಗೆ ಸಂಪಂಗಿಕೆರೆ ಅಂಗಳದಲ್ಲಿ ಗೌಡ, ಗಣಾಚಾರಿ, ದುರ್ಗಾ-ಪೂಜಾರಿ, ವೀರಕುಮಾರರು, ಕುಲಸ್ಥರು ಎಲ್ಲರೂ ನೆರೆಯುತ್ತಾರೆ. ಅಲಂಕಾರವೆಲ್ಲ ಮುಗಿದ ಮೇಲೆ ಅಲ್ಲಿಯೇ ಕರಗ-ಪೂಜಾರಿಗೆ ಧೂಪ, ದೀಪ ಆರತಿ ನಡೆದು, ವೀರಕುಮಾರರು ಅಲಗುಸೇವೆ ನಡೆಸುತ್ತಾರೆ. ಅನಂತರ ವೈಭವದ ಮೆರವಣಿಗೆಯಲ್ಲಿ ಎಲ್ಲರೂ ಕರಗ-ಪೂಜಾರಿಯನ್ನು ಮುಂದೆ ಮಾಡಿಕೊಂಡು 'ಏಳು ಸುತ್ತಿನ ಕೋಟೆ'ಗೆ ಪ್ರದಕ್ಷಿಣೆ ಮಾಡಿ ಗುಡಿಗೆ ಬರುತ್ತಾರೆ.

ಗುಡಿಯಲ್ಲಿ ಕರಗ-ಪೂಜಾರಿ, ದುರ್ಗಾ-ಪೂಜಾರಿ, ಗಣಾಚಾರಿ ಇವರು ಮೂವರು ಮಾತ್ರ ಗರ್ಭಗುಡಿಯೊಳಗೆ ಹೋಗುತ್ತಾರೆ. ಉಳಿದವರೆಲ್ಲ (ವೀರಕುಮಾರರು) ಗಣಾಚಾರಿಯ ಮನೆಯಲ್ಲಿ ಪಾನಕ-ಪಣ್ಯಾರಗಳನ್ನೂ ಪುಷ್ಪಮಾಲೆಗಳನ್ನೂ ಪಡೆದು ಗುಡಿಗೆ ಹಿಂದಿರುಗಿ ಮುಖಮಂಟಪದಲ್ಲಿಯೇ ನಿಲ್ಲುತ್ತಾರೆ. ಗರ್ಭಗುಡಿಯೊಳಗೆ ಶಕ್ತಿಪೀಠದ ಮೇಲಿರುವ ಕರಗವನ್ನು ಮತ್ತೆ ವಿಧಿಯಂತೆ ಪೂಜೆಮಾಡಿ ಕರಗ-ಪೂಜಾರಿಯು ಬೀಜಾಕ್ಷರವನ್ನು ಜಪಿಸುತ್ತಿರಲು ಕರಗವನ್ನು ಅವನ ತಲೆಯ ಮೇಲೇರಿಸುತ್ತಾರೆ. ಇದನ್ನು ದುರ್ಗಾ-ಪೂಜಾರಿ ಮತ್ತು ಗಣಾಚಾರಿಯೇ ಏಕಾಂತದಲ್ಲಿ ನಿರ್ವಹಿಸುತ್ತಾರೆ. ಈ ವಿಧಿಯನ್ನೂ ಬೇರೆ ಯಾರೂ ಕಾಣಲಾರರು. ಕರಗ-ಪೂಜಾರಿಯ ತಲೆಯೇರಿರುವ ಕರಗವನ್ನು ಅಚ್ಚಮಲ್ಲಿಗೆ ದಂಡೆಗಳಿಂದ ಸಂಪೂರ್ಣವಾಗಿ ಮುಚ್ಚಿರುತ್ತಾರೆ. ಈ ದೇವಿಗೆ ಮಲ್ಲಿಗೆ ಹೂವಿನ ಅಲಂಕಾರವೇ ಪ್ರಿಯ; ಬೇರೆ ಯಾವ ಹೂವನ್ನೂ ಈ ಸಂದರ್ಭದಲ್ಲಿ ಪೂಜೆಗೆ ಬಳಸುವುದಿಲ್ಲ. ಇದಕ್ಕೆ ಬೇಕಾಗುವ ಹೂವನ್ನು ಒದಗಿಸಲು ಗೊತ್ತಾದ ಹೂಗಾರ ಮನೆತನಗಳಿವೆ. ಅವನ್ನೆಲ್ಲ ತಂದು ಗುಡಿಯ

ಅಂಗಳದಲ್ಲೇ ಹದಿನೈದು — ಇಪ್ಪತ್ತು ಮಂದಿ (ಅದೂ ಗೊತ್ತಾದ ಮನೆಯವರೇ) ಕೂತು ನೇಮದಿಂದ ಶ್ರದ್ಧೆಯಿಂದ ಮಾಲೆಗಳನ್ನು ಕಟ್ಟುತ್ತಾರೆ. ಒಮ್ಮೆ ಕುಳಿತರೆಂದರೆ ಕಟ್ಟಿ ಮುಗಿಸುವವರೆಗೆ ಮೇಲೇಳುವಂತಿಲ್ಲ. ಕರಗದ ಮೇಲೆ ನೆರಿಗೆನೆರಿಗೆಯಾಗಿ ಎಷ್ಟು ಎಳೆಗಳ ದಂಡೆಗಳನ್ನು ಹಾಕಬೇಕೆಂದು ನಿಯಮವಿದೆ. ಅಷ್ಟೇ ದಂಡೆಗಳನ್ನು, ಹಾಗೆಯೇ, ಕರಾರುವಾಕ್ಕಾಗಿ ಮೂಡಿಸುವ ಪದ್ಧತಿ ಹಿಂದಿನಿಂದ ಬಂದಿದೆ.

ಕರಗದ ಮೂಲಾಕೃತಿಯನ್ನು ಹೀಗೆ ಹೂಮಾಲೆಗಳಿಂದ ಮುಚ್ಚಿದ ಮೇಲೆ, ಆದಿಶಕ್ತಿಯ ಆಯುಧಗಳಾದ ಶಂಖ, ಚಕ್ರ, ಡಮರು, ತ್ರಿಶೂಲ, ಗದೆಗಳನ್ನು ಅಳವಡಿಸುತ್ತಾರೆ; ಅಲ್ಲಲ್ಲಿ ಬಾವುಟಗಳನ್ನು ಸಿಕ್ಕಿಸುತ್ತಾರೆ. ನೀಳಾದ ಕಿರೀಟದಂತೆ ಕಾಣಿಸುವ ಈ ಕರಗದ ಮೇಲ್ಭಾಗದಲ್ಲಿ ಕಲಶ, ಪ್ರಭಾವಳಿ ಮತ್ತು ಛತ್ರಗಳನ್ನು ಮೂಡಿಸುವರು. ಒಮ್ಮೆ ಕರಗವು ತಲೆಯ ಮೇಲೆ ಕುಳಿತಿತೆಂದರೆ ಪೂಜಾರಿಯು ಮತ್ತೆ ಅದನ್ನು ಮುಟ್ಟಲಾಗದು; ಆದುದರಿಂದ ಅದನ್ನು ಅವನ ತಲೆಯ ಮೇಲೆ ಭದ್ರಪಡಿಸುವರು. ಪೂಜಾರಿಯ ಬಲಗೈಯಲ್ಲಿ ಬಾಕು, ಎಡಗೈಯಲ್ಲಿ ಮಂತ್ರದ ಬೆತ್ತ ಇರುತ್ತವೆ. ಇವು ಪೂಜಾರಿಯು ದಿನವೂ ಸ್ನಾನಮಾಡುವಾಗಲೂ ಕೈಗಳಲ್ಲಿರಬೇಕು; ದೇವಿಗೆ ನಡೆಯುವ ಪೂಜೆಯಲ್ಲಿ ಇವೂ ತಪ್ಪದೆ ಪಾಲ್ಗೊಳ್ಳುತ್ತವೆ. ಇವು ತುಂಬ ಹಿಂದಿನಿಂದ ಬಂದಿರುವ ಆಯುಧ ವಿಶೇಷಗಳು.

ಕರಗ ಹೀಗೆ ಹೊರಬರಲು ಸಿದ್ಧವಾದಾಗ ಗರ್ಭಗುಡಿಯ ಬಾಗಿಲು ತೆಗೆಯುತ್ತಾರೆ. ಒಡನೆಯೇ ಭಾಂಕಾ, ಭೇರಿ ಮೊದಲಾದ ವಾದ್ಯಗಳು ಮೊಳಗುವಾಗಲೇ ವೀರಕುಮಾರರ

ಗೋವಿಂದ ಘೋಷವೂ ಮುಗಿಲನ್ನು ಮುಟ್ಟುತ್ತದೆ; ನೆರೆದ ಭಕ್ತರಿಂದ ಜಯಘೋಷ ನಡೆಯುತ್ತದೆ. ಎಲ್ಲರೂ ಕರಗ-ಪೂಜಾರಿಯು ಹೊರಗೆ ಬರುವುದನ್ನೇ ಎದುರು ನೋಡುತ್ತ ನಿಂತಿರುತ್ತಾರೆ. ನಡುರಾತ್ರಿಯ ಸುಮಾರಿಗೆ ಕರಗವು ಗರ್ಭ ಗುಡಿಯಿಂದ ಹೊರಹೊರಟು ಬರುವಾಗ ದ್ವಾರವು ಕಿರಿದಾದುದರಿಂದ ಪೂಜಾರಿಯು ಮಂಡಿಯೂರಿ ಕುಳಿತು ಹೊಸ್ತಿಲನ್ನು ದಾಟಬೇಕು; ಈ ದೃಶ್ಯ ಮೋಹಕವಾಗಿರುತ್ತದೆ. ಇದು ಸಡಗರದ ಪರಮಾವಧಿಯೆನ್ನಬಹುದು. ಎಲ್ಲರ ಕಣ್ಣೂ ಆಗ ಕರಗದ ಮೇಲೇ ; ಎಲ್ಲರ ಎಲ್ಲ ಭಾವನೆಗಳೂ ಕರಗ ಶಕ್ತಿಯಲ್ಲೇ ಕೇಂದ್ರೀಕೃತವಾಗಿರುತ್ತವೆ.

ಸಾವಿರಾರು ಜನ ನೆರೆದಿದ್ದು, ನೂರಾರು ವೀರಕುಮಾರರು ಹೊಳೆಯುವ ಕತ್ತಿಗಳನ್ನು ಹಿರಿದು "ಗೋವಿಂದಾ!" ಎಂದು ಕೂಗುತ್ತ ಪೂಜಾರಿಯ ಸುತ್ತರಿದು ಕರಗವನ್ನು ಬಿಜಯಮಾಡಿಸಿಕೊಂಡು ಗುಡಿಯಿಂದ ಹೊರಡುತ್ತಾರೆ. ಮೊದಲು ಗುಡಿಗೆ ಪ್ರದಕ್ಷಿಣೆ, ಆಮೇಲೆ ತೇರಿಗೆ. ಅನಂತರ ನಗರಸಂಚಾರ.

ಕರಗವಿನ್ನೂ ಗರ್ಭಗುಡಿಯಲ್ಲೇ ಇರುವಾಗ, ಎಂದರೆ ನಡುರಾತ್ರಿಗೆ ಮೊದಲೇ, ಮಹಾಮಂಗಳಾರತಿ ಆದೊಡನೆ ಗುಡಿಯ ಮುಂದಿರುವ ಸಜ್ಜಾದ ತೇರು ಪೂರ್ವದಿಕ್ಕಿಗೆ ಹೊರಡುತ್ತದೆ. ಈ ತೇರಿಗೆ ಬ್ರಹ್ಮರಥವೆಂದು ಹೆಸರು. ತೇರನ್ನು ಸೊಗಸಾಗಿ ಕಟ್ಟಿ ನಿಲ್ಲಿಸಿದರೆ ಅದರ ಎತ್ತರ ಮಹಾದ್ವಾರ ಗೋಪುರವನ್ನೂ ಮೀರಿಸುತ್ತದೆ. ತ್ರಯೋದಶಿಯ ಸಂಜೆಯ ವೇಳೆಗೆ ರಥವು ಸಿದ್ಧವಾಗಬೇಕೆಂಬ ನಿಯಮವಿದೆ. ಅದರ ಮೇಲ್ಭಾಗವನ್ನು ಭೀಮನ ಗದೆಯಂತೆ ಅಳವಡಿಸಿರುತ್ತಾರೆ; ಮುಂದೆ ಹನುಮಂತನ ಧ್ವಜಲಾಂಛನವಿರು

ತ್ತದೆ. ರಥವನ್ನೇರುವ ಮೂರ್ತಿಗಳು ದ್ರೌಪದಿ-ಅರ್ಜುನರು. ಹಿಂದಿನ ರಾತ್ರಿ ಅವರಿಗೆ ಕಲ್ಯಾಣೋತ್ಸವ ನಡೆದಿರುತ್ತದೆ. ದ್ರೌಪದಿಯನ್ನು ಸ್ವಯಂವರದಲ್ಲಿ ಗೆದ್ದವನು ಅರ್ಜುನನೇ ಅಲ್ಲವೆ? ಆದರೆ ತೇರಿಗೂ ಕರಗಕ್ಕೂ ನೇರವಾದ ನೆಂಟು ಕಡಮೆಯೇ. ಕರಗ ಗುಡಿಯಿಂದ ಹೊರಡುವ ವೇಳೆಗೆ ತೇರು ಸರಿದು ಸ್ವಲ್ಪದೂರದಲ್ಲಿ ಹನುಮಂತನ ಗುಡಿಯ ಬಳಿ ನಿಂತಿರುತ್ತದೆ. ಕರಗವು ಇಲ್ಲಿಗೆ ಬಂದು ತೇರಿಗೆ ಪ್ರದಕ್ಷಿಣೆ ಮಾಡಿ ಹನುಮಂತನ ಗುಡಿಯಲ್ಲಿ ಪೂಜೆ ಸ್ವೀಕರಿಸಿ ಮುಂದಕ್ಕೆ ಹೊರಡುತ್ತದೆ.

ಅನಂತರ ತೇರು ಕದಲಿ ನಗರ್ತಪೇಟೆ, ದೊಡ್ಡಪೇಟೆಗಳನ್ನು ಹಾದು ಬೆಳಕು ಹರಿಯುವ ಸಮಯಕ್ಕೆ ಕೃಷ್ಣರಾಜೇಂದ್ರ ಮಾರುಕಟ್ಟೆಗೆ ಬರುತ್ತದೆ. ಊರಿನ ಎಲ್ಲ ಗುಡಿಗಳಲ್ಲಿಯೂ ಹಿಂದಿನ ದಿನ ವಿಶೇಷ ಪೂಜೆ ನಡೆದು, ಆಯಾ ಗುಡಿಗಳಿಂದ ಉತ್ಸವ ಮೂರ್ತಿಗಳನ್ನು ಹೊರಡಿಸಿಕೊಂಡು ರಾತ್ರಿಯ ವೇಳೆಗೆ ಮಾರುಕಟ್ಟೆ ಚೌಕದಲ್ಲಿ ನಿಂತಿರುತ್ತಾರೆ. ಧರ್ಮರಾಯಸ್ವಾಮಿ ಗುಡಿಯಿಂದ ತೇರು ಅಲ್ಲಿಗೆ ಬಂದೊಡನೆ ಸಡಗರ ಹೆಚ್ಚುತ್ತದೆ. ಭವ್ಯವಾಗಿ ಅಲಂಕರಿಸಿದ ಮಂಟಪಗಳು, ಪಲ್ಲಕ್ಕಿಗಳು, ರಥಗಳು ನೂರಾರು ಅಲ್ಲಿ ಸೇರಿರುತ್ತವೆ. ಕರಗದ ತೇರು ಎಲ್ಲಕ್ಕಿಂತ ಮಿಗಿಲಾಗಿ ಮೆರೆಯುತ್ತದೆ. ಈ ತೇರಿಗೆ ನೆರೆದ ಜನರು ಹಣ್ಣು-ದವನ ಒಪ್ಪಿಸುವ ಪದ್ಧತಿಯಿದೆ. ರಥವನ್ನೇರಿ ಹೊರಟವನು ಅರ್ಜುನನೊಬ್ಬನೇ ಆದರೂ (-ದ್ರೌಪದಿಯ ಬಚ್ಚಣಿಗೆ ಮರದ ಮೂರ್ತಿಯೂ ಇರುತ್ತದೆ-) ಅದರ ಹೆಸರೇನೋ ಧರ್ಮರಾಯಸ್ವಾಮಿ ರಥೋತ್ಸವವೆಂದೇ. ಅದು ಸಂಚಾರ ಮುಗಿಸಿ ನೆಲೆ ಮುಟ್ಟು

ವಾಗ ಮರುದಿನ ಬೆಳಿಗ್ಗೆ ಹತ್ತು ಹನ್ನೊಂದು ಗಂಟೆಯಾಗುತ್ತದೆ.

## ಕರಗಸಂಚಾರ

ಕರಗದ ದಾರಿಯೇ ಬೇರೆ. ಕರಗ ಗುಡಿಯಿಂದ ಹೊರಡುವಾಗ ಬಿಟ್ಟು ಮತ್ತೆ ಕರಗಕ್ಕೂ ತೇರಿಗೂ ಭೇಟಿಯಿಲ್ಲ. ಕರಗವು ಹನುಮಂತರಾಯನ ಗುಡಿಯಿಂದ ನಗರ್ತಪೇಟೆ ವೇಣುಗೋಪಾಲಸ್ವಾಮಿ ಗುಡಿಯಲ್ಲಿ ಪೂಜೆ ಪಡೆದು, ಸಿದ್ದಣ್ಣ ಗಲ್ಲಿಯ ಬೈರೇದೇವರ ಗುಡಿಯನ್ನು ದಾಟಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ಅವೆನ್ಯೂ ರಸ್ತೆಯ ಶಿವಾಲಯ, ದೊಡ್ಡಪೇಟೆ ಈ ದಾರಿಯಲ್ಲಿ ಕೃಷ್ಣರಾಜೇಂದ್ರ ಮಾರುಕಟ್ಟೆಗೆ ಬಂದು ರಾಣಾಸಿಂಗ ಪೇಟೆ, ಮುರಾರಿಸ್ವಾಮಿ ಮಠ, ಬೀರೇದೇವರ ಗುಡಿಗಳನ್ನು ಹಾದು ಅರಳೇಪೇಟೆಗೆ ಬರುತ್ತದೆ.

ಅಲ್ಲಿ ಕರಗವು ಹಜರತ್ ತವಕ್ಕಲ್ ಮಸ್ತಾನ್ ಸುಹ್ರಾವರ್ದಿ ಸಾಹೇಬರ ದರ್ಗಾಕ್ಕೆ (ಎಂದರೆ ಅವರು ಒಪ್ಪವಾಗಿರುವೆಡೆಗೆ) ಬರುತ್ತದೆ. ಈ ಸಾಹೇಬರು ಕರಗ ಶಕ್ತಿಯ ಭಕ್ತರಾಗಿದ್ದ ಸಂತರೆಂದು ಪ್ರತೀತಿಯಿದೆ; ಅವರ ವಿಚಾರವಾಗಿ ಹೆಚ್ಚು ತಿಳಿದುಬರುವುದಿಲ್ಲ. ಈ ದರ್ಗಾದಲ್ಲಿ ಪ್ರತಿವರ್ಷವೂ ಕರಗಕ್ಕೆ ಪುಷ್ಪಹಾರ, 'ಫಾತ್ಯಾ' (ಧೂಪಾರತಿ) ಸನ್ಮಾನ ನಡೆಯುತ್ತದೆ. ಕರಗ–ಪೂಜಾರಿಯು ಅಲ್ಲಿ ನಾಟ್ಯವಾಡುವುದೂ, ವೀರಕುಮಾರರು ಅಲಗುಸೇವೆ ನಡೆಸುವುದೂ ಪದ್ಧತಿ. ಅಲ್ಲಿ ಬಹುಸಂಖ್ಯೆಯಲ್ಲಿ ಮುಸಲ್ಮಾನರು ನೆರೆದಿದ್ದು ಕರಗ–ಪೂಜಾರಿಯಿಂದ ನಿಂಬೆಹಣ್ಣು ಪ್ರಸಾದ ಸ್ವೀಕರಿಸುತ್ತಾರೆ.

ಅಲ್ಲಿಂದ ಮುಂದೆ ಬಳೇಪೇಟೆ, ಕಿಲಾರಿರಸ್ತೆಯ ಧರ್ಮ ರಾಯಸ್ವಾಮಿ ಗುಡಿ, ಯಲಹಂಕಗೇಟಿನ ಆಂಜನೇಯ ಸ್ವಾಮಿ ಗುಡಿ, ತುಪ್ಪದ ಆಂಜನೇಯಸ್ವಾಮಿ ಗುಡಿ, ಚೌಡೇಶ್ವರಿ ಗುಡಿ, ಕುಂಬಾರಪೇಟೆ, ಗೊಲ್ಲರ ಪೇಟೆ, ತಿಗಳರ ಪೇಟೆ, ಗುಮ್ಮಟ ಮೊದಲಾದ ಕಡೆ ಸಂಚರಿಸಿ ಸ್ವಸ್ಥಾನಕ್ಕೆ ಹಿಂದಿರುಗುತ್ತದೆ. ತಿಗಳರ ಪೇಟೆಯಲ್ಲಿ ವಾಸಮಾಡುವ ಎಲ್ಲ ವೀರಕುಮಾರರ ಮನೆಗಳಿಗೂ ಕರಗವು ಹೋಗಿ ಪೂಜೆ ಪಡೆ ಯುವ ವಾಡಿಕೆಯಿದೆ. ಕರಗವು ಸಂಚಾರವನ್ನು ಮುಗಿಸಿ ಸೂರ್ಯೋದಯದ ವೇಳೆಗೆ ಹಿಂದಕ್ಕೆ ಬರಬೇಕೆಂಬ ನಿಯಮ ವಿದೆ. ಸಾಮಾನ್ಯವಾಗಿ ಕರಗವು ಸ್ವಸ್ಥಾನ ತಲುಪುವ ಸಮಯ ಬೆಳಿಗ್ಗೆ ಆರಾಗುತ್ತದೆ. ಸಂಚಾರದಲ್ಲಿ ನಗರದ ಒಂಬತ್ತು ಬಾಗಿಲುಗಳನ್ನೂ, ನಾಲ್ಕು ಆಂಜನೇಯ ಗುಡಿಗಳನ್ನೂ ಮುಟ್ಟಬೇಕೆಂಬ ನಿಯಮವಿದೆ. ಒಂಬತ್ತು ಬಾಗಿಲುಗಳೇನೋ ಈಗ ಬರಿಯ ಸಂಕೇತವಷ್ಟೆ. ನಾಲ್ಕು ಆಂಜನೇಯನ ಗುಡಿ ಗಳು–ಕರಗದ ಗುಡಿಯ ಬಳಿಯೇ ಇರುವುದೊಂದು, ಮೈಸೂರು ಬ್ಯಾಂಕ್ ಬಳಿ (ಯಲಂಹಕಗೇಟ್) ಇರುವುದಿ ನ್ನೊಂದು, ತುಪ್ಪದ ಆಂಜನೇಯನ ಗುಡಿ ಮತ್ತೊಂದು, ಕೋಟೆಯ ಆಂಜನೇಯನ ಗುಡಿ ನಾಲ್ಕನೆಯದು.

ಕರಗಸಂಚಾರವೇ ಕರಗಸಂದರ್ಭದ ಸಡಗರದಲ್ಲಿ ಕಾವೇರಿಸುವುದು. ವೀರಕುಮಾರರೊಡಗೂಡಿ, ಭಾಂಕಾ, ಘಂಟೆ ಮೊದಲಾದ ವಾದ್ಯನಾದದೊಂದಿಗೆ ಜನರ ಜಯ ಘೋಷವೂ ಸೇರಿ, ಕರಗಶಕ್ತಿಯನ್ನು ಭೌತಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಹೊತ್ತ ಪೂಜಾರಿಯು ಆವೇಶದಿಂದ ಓಡುತ್ತ, ಕುಣಿಯುತ್ತ, ನಡೆಯುತ್ತ, ಮಂಡಿಯೂರುತ್ತ ಬರುವುದು ಒಮ್ಮೆ ನೋಡಿದರೆ ನೆನಪಿನಿಂದ ಎಂದೂ ಜಾರ

ದಿರುವ ಪ್ರಸಂಗ. ಲಕ್ಷಾಂತರ ಜನರು ನೆರೆದಿದ್ದು ಓಣಿ ಓಣಿಗಳಲ್ಲಿಯೂ, ಬೀದಿ ಬೀದಿಗಳಲ್ಲಿಯೂ ತವಕದಿಂದ ಕಾದಿರುತ್ತಾರೆ. ಎಲ್ಲರಿಗೂ ಕರಗ ದರ್ಶನವಾಗುವುದು ಕಷ್ಟವೇ. ಕರಗ ಬಂತೆಂದು ಕೂಗು ಕೇಳಿದೊಡನೆ ಜನರ ನೂಕುನುಗ್ಗಲಾಟ ಹೆಚ್ಚುತ್ತದೆ; ಕರಗದ ಕಡೆ, ಕರಗದ ಹಿಂದೆ ಓಡಲಾರಂಭಿಸುತ್ತಾರೆ. ಕರಗ ಸಂಚರಿಸುವ ದಾರಿಯನ್ನು ಮೊದಲೇ ಗೊತ್ತು ಮಾಡಿಕೊಂಡು ಅಣಿಮಾಡಿಕೊಂಡು, ಪತ್ರಿಕೆಗಳಲ್ಲಿ ತಿಳಿಯಪಡಿಸಿರುತ್ತಾರೆ. ಹಾಗಾದರೂ ಕರಗದ ದಾರಿ ಇದೇ ಎಂದಾಗಲೀ, ಈ ವೇಳೆಗೇ ಕರಗ ಬರುವುದೆಂದಾಗಲೀ ನಿಖರವಾಗಿ ಸೂಚಿಸುವುದಾಗದು. ಹೀಗಾಗಿ 'ಕರಗ ಬಂತು!', 'ಕರಗ ಹೋಯಿತು!' ಎಂಬಷ್ಟು ಕೂಗೇ ಹಲವರ ಪಾಲಿಗೆ ದಕ್ಕುವುದು. ಅವರ ನೋಟಕ್ಕೆ ಸಿಗುವುದು ಜನರ ಗುಂಪಷ್ಟೇ! ಕರಗದ ಓಟ ಮಿಂಚಿನಂತೆ; ನೋಟ ತೋರಿ ಮರೆಯಾಗುತ್ತದೆ.

ಹುಣ್ಣಿಮೆಯ ನಡುರಾತ್ರಿಯಲ್ಲಿ ಹೊರಟ ಕರಗ ಪಾಡ್ಯದ ಮುಂಜಾನೆ ನೆಲೆಯನ್ನು ಮುಟ್ಟಿದ ಮೇಲೆ, ಅದನ್ನು ಪೂಜಾರಿಯ ತಲೆಯಿಂದ ಇಳಿಸಿ ಶಕ್ತಿಪೀಠದ ಮೇಲೆ ಮತ್ತೆ ಇರಿಸುತ್ತಾರೆ. ಈ ವಿಧಿಯೂ ಗುಟ್ಟಾಗಿಯೇ ನಡೆಯುವುದು. ದುರ್ಗಾ–ಪೂಜಾರಿ, ಗಣಾಚಾರಿ ಇವರಷ್ಟೇ ಇದರಲ್ಲಿ ನೆರವಾಗುವವರು.

## ಮತ್ತೆರಡು ದಿನಗಳು

ಕರಗಸಂಚಾರವಾದ ಮೇಲೆ ಪಾಡ್ಯ, ಬಿದಿಗೆ ಎರಡೂ ದಿನಗಳಲ್ಲಿ ಕೆಲವು ವಿಧಿಗಳು ನಡೆದು ಅನಂತರ ಧ್ವಜಾವರೋಹಣವಾಗಿ ಉತ್ಸವ ಕೊನೆಗೊಳ್ಳುತ್ತದೆ. ಗರ್ಭಗುಡಿಯಲ್ಲಿ ಕರಗಕ್ಕೆ ಅಖಂಡವಾದ ಪೂಜೆ ನಡೆಯುತ್ತಿರುವಾಗ,

ಹೊರಗಡೆ 'ಗಾವು ಹಿಡಿಯುವ' ವಿಧಿಗೆ ಅಣಿಯಾಗುತ್ತಿರುತ್ತದೆ. ಅಂದು ರಾತ್ರಿ ಎರಡು ಗಂಟೆಯ ಸುಮಾರಿಗೆ 'ಏಳು ಸುತ್ತಿನ ಕೋಟೆ'ಗೆ ಉತ್ಸವಮೂರ್ತಿಗಳನ್ನು ಚಿಕ್ಕ ತೇರಿನಲ್ಲಿ ಬಿಜಯಮಾಡಿಸಿಕೊಂಡು, ಪೋತರಾಜನನ್ನೂ ಕೊಂಡೊಯ್ದು, ಅಲ್ಲಿ ದುರ್ಗಾ-ಪೂಜಾರಿಯಿಂದ 'ಪುರಾಣ' ಕಾಲಕ್ಷೇಪ ಕೊಂಚ ಹೊತ್ತು ನಡೆಯುತ್ತದೆ. ಕರಗದ ವಿವರಗಳನ್ನೊಳಗೊಂಡ 'ವಹ್ನಿಪುರಾಣ'ದ ಕೆಲವು ಭಾಗಗಳನ್ನು ಈತನು ನಿರೂಪಿಸುತ್ತಾನೆ. ನಿರೂಪಣೆಯ ಭಾಷೆ ಪ್ರಧಾನವಾಗಿ ತಮಿಳು. ತೆಲುಗೂ ಸೇರುತ್ತದೆ. ಮಹಾಭಾರತದ ಕೆಲವು ಪ್ರಸಂಗಗಳೂ ಈ ನಿರೂಪಣೆಯಲ್ಲಿ ಸೇರಿಬರುತ್ತವೆ. ಇದಾದ ಮೇಲೆ ಎಲ್ಲರೂ ಗುಡಿಗೆ ಹಿಂದಿರುಗುತ್ತಾರೆ.

ಬೆಳಗಿನ ಜಾವ ಸುಮಾರು ಮೂರುವರೆ ಅಥವಾ ನಾಲ್ಕು ಗಂಟೆಗೆ ನಡೆಯುವ 'ಗಾವು ಹಿಡಿಯುವ' ವಿಧಿಗೆ ಸಿದ್ಧತೆ ಜರುಗುತ್ತದೆ. 'ಗಾವು ಹಿಡಿಯುವ' ಇಬ್ಬರು ಅದೇ ಮನೆತನಕ್ಕೆ ಸೇರಿಬಂದವರು, ಗುಡಿಯ ಬಳಿಯೇ ಗರಡಿಮನೆಯಿಂದ ಇವರನ್ನು ಗಣಾಚಾರಿ, ದುರ್ಗಾ-ಪೂಜಾರಿ, ಭಾಂಕಾದಾಸಯ್ಯ, ಮೊದಲಾದವರು ಗುಡಿಗೆ ಸನ್ಮಾನದಿಂದ ಕರೆತರುವರು. ಇವರಿಗೆ ಮಲ್ಲಿಗೆ ಹೂಮಾಲೆ, ಹೂಪಾಗು ಮೊದಲಾದುವನ್ನು ಸಮರ್ಪಿಸಿದ ಮೇಲೆ ದುರ್ಗಾ-ಪೂಜಾರಿಯು ಅವರಿಗೆ ಬೀಜಾಕ್ಷರಗಳನ್ನು ಉಪದೇಶ ಮಾಡುತ್ತಾನೆ. ಆ ವೇಳೆಗೆ ಒಂದು ಕರಿ ಮೇಕೆಯನ್ನುಹಿಡಿದು ಅವರ ಮುಂದೆ ತರುತ್ತಾರೆ. ಇವರಿಬ್ಬರ ಮೇಲೆ ಆವೇಶ ಬಂದು, ಬಾಯಿಂದ ಮೇಕೆಯ ಮೈಯನ್ನು ಕಚ್ಚಿ ಅದರ ರಕ್ತವನ್ನು ಕುಡಿಯತೊಡಗುವರು. ಒಡನೆಯೇ ಮೇಕೆಯನ್ನೂ ಅವರನ್ನೂ ಬೇರ್ಪಡಿಸಿ, ಅವರಿಬ್ಬರ ಬಾಯಿಗೆ ಪೊಂಗಲು ನೈವೇದ್ಯದ ಅನ್ನವನ್ನು

ತುರುಕುವರು. ಹೀಗೆ ಮಾಡದಿದ್ದರೆ ಅವರ ರಕ್ತಪಿಪಾಸೆ ಇಂಗುವುದಿಲ್ಲವಂತೆ. ಪೂಜಾರಿಯು ಅವರ ಮೇಲೆ ಭಂಡಾರ ವನ್ನಿಟ್ಟು, ಆರತಿ ಬೆಳಗಿ ಶಾಂತಿಮಾಡುತ್ತಾನೆ. ಇವೆಲ್ಲ ವಿಧಿ ಗಳೂ ಪೋತರಾಜನ ಸಾನ್ನಿಧ್ಯದಲ್ಲಿಯೇ ನಡೆಯುವುವು. ಅವನಿಗೆ ಶಾಂತಿ ಮಾಡುವುದೇ ಈ ವಿಧಿಯ ಉದ್ದೇಶ.

ಮರುದಿನ ವಸಂತೋತ್ಸವ. ಇದು ಮುಖ್ಯವಾಗಿ ವಿನೋದ. ಮೊದಲಲ್ಲಿ, ಉತ್ಸವಾನಂತರ ಅವಭೃತವೆಂಬ ತಾತ್ಪರ್ಯವಿದ್ದಿತೋ ಏನೋ. ಇದನ್ನು ಓಕುಳಿಯಾಟ ವೆನ್ನಬೇಕು. ಮನೆಮನೆಗಳಿಂದ ಪೂಜೆಮಾಡಿದ ಅರಿಶಿನ ನೀರನ್ನು ಬಿಂದಿಗೆಗಳಲ್ಲಿ ತಂದು ಸುರಿದು ಶೇಖರಿಸುತ್ತಾರೆ; ಸಂಜೆ ನಾಲ್ಕು ಗಂಟೆಯ ಸಮಯಕ್ಕೆ ವೀರಕುಮಾರರೂ ಕುಲದವರೂ ಭಕ್ತರೂ ಸೇರಿ ಈ ನೀರನ್ನು ಎರಚಾಡುತ್ತ ವಿನೋದವಾಗಿ ಕಾಲಕಳೆಯುತ್ತಾರೆ. ದ್ರೌಪದಿಯ ಉತ್ಸವ ಮೂರ್ತಿಯನ್ನು ಸಣ್ಣ ತೇರಿನ ಮೇಲೇರಿಸಿ ತಿಗ ಳರ ಪೇಟೆಗೆ ಕೊಂಡೊಯ್ಯುವ ವಾಡಿಕೆಯಿದೆ. ಇದು ವಸಂತೋತ್ಸವದ ಅಂಗವಾಗಿ. ಈ ತೇರು ಮತ್ತೆಲ್ಲಿಯೂ ಹೋಗುವುದಿಲ್ಲ.

ಇದೇ ಸಂದರ್ಭದಲ್ಲಿ 'ಹುಟ್ಟಿಗೆಗಾಯಿ' ಎಂಬ ಇನ್ನೊಂದು ಕ್ರೀಡೆಯೂ ನಡೆಯುತ್ತದೆ. ಅಡ್ಡವಾಗಿ ಕಟ್ಟಿದ ಹಗ್ಗವೊಂದಕ್ಕೆ ಒಂದು ತೆಂಗಿನಕಾಯನ್ನು ಒಂದು ಗೋಣಿ ಚೀಲದಲ್ಲಿ ಕಟ್ಟಿ ತೂಗಿಬಿಡುತ್ತಾರೆ; ಒಂದು ಕಡೆಯಿಂದ ಹಗ್ಗವನ್ನು ಜಗ್ಗಾಡುತ್ತಿರುವುದರಿಂದ ಈ ಚೀಲ ಒಂದೇ ಕಡೆ ನಿಲ್ಲುವುದಿಲ್ಲ. ಎರಡೂ ಕಡೆಗಳಲ್ಲಿ ವೀರಕುಮಾರರು ಸರತಿ ಯಂತೆ ನಿಂತು ಒನಕೆಗಳನ್ನು ಹಿಡಿದು ಈ ತೆಂಗಿನಕಾಯಿ ಚೀಲವನ್ನು ಹೊಡೆಯಬೇಕು. ಚೀಲ ಆಡ್ಡಾಡುತ್ತಿರುವುದ

ರಿಂದ ಇದು ಕಷ್ಟದ ಕೆಲಸವಾಗುತ್ತದೆ. ಒಂದು ಕಾಯನ್ನು ಒಡೆದ ಮೇಲೆ, ಅದನ್ನು ನೆರೆದಿದ್ದವರಿಗೆ ಹಂಚಿ, ಮತ್ತೊಂದು ಕಾಯನ್ನು ಚೀಲದಲ್ಲಿಟ್ಟು ಹೊಡೆಯತೊಡಗುತ್ತಾರೆ. ಹೀಗೆ ಒಟ್ಟು ಇಪ್ಪತ್ತೈದು ಕಾಯಿಗಳನ್ನು ಒಡೆಯುತ್ತಾರೆ. ಇದು 'ಹುಟ್ಟಗೆಗಾಯಿ ಸೇವೆ' ಎನಿಸಿಕೊಳ್ಳುತ್ತದೆ. ಇದಕ್ಕೆ ಪೂರ್ವ ಭಾವಿಯಾಗಿ ದುರ್ಗಾ–ಪೂಜಾರಿಯು ಹಾಲು ತುಂಬಿದ ಮಡಕೆಯೊಂದನ್ನು ಕಟ್ಟಿ ಅದನ್ನು ಹೊಡೆಯುವನು.

ಅದೇ ರಾತ್ರಿ ಧ್ವಜಾವರೋಹಣ. ಉತ್ಸವವೆಲ್ಲ ಮುಗಿದ ಸೂಚನೆಯಾಗಿ, ಧ್ವಜಸ್ತಂಭಕ್ಕೆ ಮತ್ತೆ ಪೂಜೆ ನಡೆದು, ಮೇಲ್ಭಾಗದ ಬಾವುಟವನ್ನು ಕೆಳಗಿಳಿಸುತ್ತಾರೆ. ಅನಂತರ ಪೂಜಾರಿಗಳು, ವೀರಕುಮಾರರು ಎಲ್ಲರಿಗೂ ವ್ರತವಿಸರ್ಜನೆ ಯಾಗುತ್ತದೆ, ಕಂಕಣಗಳನ್ನು ತೆಗೆಯುತ್ತಾರೆ. ಒಂಬತ್ತು ದಿನಗಳ ನೇಮ ಅಲ್ಲಿಗೆ ಮುಗಿಯಿತೆಂದು ತಾತ್ಪರ್ಯ. ಧ್ವಜಾ ವರೋಹಣವೂ ರಾತ್ರಿಯೇ ನಡೆಯುವ ವಿಧಿ; ಅದು ಮುಗಿ ಯುವಾಗ ರಾತ್ರಿ ಒಂಬತ್ತು – ಹತ್ತು ಗಂಟೆಯಾಗುತ್ತದೆ. ಇವೆಲ್ಲ ಮುಗಿದ ಮೇಲೆ ದುರ್ಗಾ–ಪೂಜಾರಿ, ಕರಗ–ಪೂಜಾರಿ, ಗಣಾಚಾರಿ ಇವರು ಮೂವರೂ ಸರಿರಾತ್ರಿಯಲ್ಲಿ ಗುಟ್ಟಾಗಿ ಕರಗವನ್ನು ವಿಸರ್ಜನೆ ಮಾಡಿ ಬರುತ್ತಾರೆ.

## ಅಗ್ನಿಕರಗ

ಇವೆಲ್ಲ ಶಿವಕರಗದ ವಿವರಗಳಾದರೆ ಕೆಲವು ಕಡೆ ನಡೆಯುವ 'ಅಗ್ನಿಕರಗ'ದ ವಿವರಗಳು ಕೊಂಚಮಟ್ಟಿಗೆ ಬೇರೆಯೇ. ಬೆಂಗಳೂರಿನಲ್ಲೇ ದಂಡಿನ ಧರ್ಮರಾಯಸ್ವಾಮಿ ಕೋಇಲ್ ರಸ್ತೆಯಲ್ಲಿರುವ ಗುಡಿಯಲ್ಲಿಯೂ ಕಲಾಸಿಪಾಳ್ಯದ ಗುಡಿಯಲ್ಲಿಯೂ ಈ ಬಗೆಯ ಕರಗ ನಡೆಯುತ್ತದೆ. ಹಲ

ಸೂರುಪೇಟೆಯು ಕರಗ ನಡೆದ ಒಂದು ತಿಂಗಳ ನಂತರ ವೈಶಾಖ ಹುಣ್ಣಿಮೆಗೆ ಸರಿಯಾಗಿ ಇದು ನಡೆಯುವ ವಾಡಿಕೆ. ಇದರಲ್ಲಿ ಮುಖ್ಯ ವಿವರವೆಂದರೆ 'ಹೊಂಡ ಹಾಯುವುದು' (ಅಥವಾ ಬೆಂಕಿಯ ಮೇಲೆ ನಡೆಯುವುದು). ಆಳ, ಅಗಲ, ಉದ್ದಗಳನ್ನು ಖಚಿತಗೊಳಿಸಿ ಹೊಂಡವೊಂದನ್ನು ಅಗೆಸಿ ಅದರ ತುಂಬ ಕಟ್ಟಿಗೆಗಳನ್ನು ಪೇರಿಸಿ ಉರಿ ಹಚ್ಚುತ್ತಾರೆ; ಉರಿಯೆಲ್ಲ ಅಡಗಿ, ನಿಗಿನಿಗಿ ಕೆಂಡ ಹೊಂಡದ ತುಂಬ ಕಾಣಿಸಿಕೊಂಡಾಗ ಕರಗ-ಪೂಜಾರಿಯೂ ಹರಕೆಹೊತ್ತ ಭಕ್ತರೂ ಆ ಕೆಂಡದ ಮೇಲೆ ಬರಿಗಾಲಲ್ಲಿ ನಡೆದು ಸುಮಾರು ಉದ್ದವಾದ ಹೊಂಡವನ್ನು ಹಾಯುತ್ತಾರೆ.

ಇಲ್ಲಿ ಹೊರುವ ಕರಗ ಮಣ್ಣಿನ ಗಡಿಗೆಯೇ, ಹೂವುಗಳಿಂದ ಅದನ್ನು ಅಲಂಕರಿಸಿದ್ದರೂ ಅದರ ಸ್ವರೂಪವನ್ನು ಮುಚ್ಚದೆ ಹಾಗೆಯೇ ಕಾಣಿಸುತ್ತಾರೆ. ಕರಗಕ್ಕೆ ಮೊದಲು, ವಿಧ್ಯುಕ್ತವಾಗಿ ಪೂಜೆಮಾಡಿದ ಗಡಿಗೆಯ ನಡುವೆ ಕತ್ತಿಯೊಂದನ್ನು ತುದಿಕೆಳಗೆ ಮಾಡಿ ನಿಲ್ಲಿಸುತ್ತಾರೆ. ಅದು ನೆಟ್ಟಗೆ ನಿಂತರೆ ಮುಂದಿನ ಕರಗ ನಡೆಯಬೇಕೆಂದೂ ಆಗಲೆ ಓಲಿಬಿಟ್ಟರೆ ನಡೆಯದೆಂದೂ ನಂಬಿಕೆಯಿದ್ದಂತೆ ತೋರುತ್ತದೆ. ಇದು ಮೂರು ದಿನಗಳ ಕರಗ ಅಷ್ಟೆ. ಕರಗ ನಡೆಯುವುದು ಸೂರ್ಯ ಮುಳುಗಿದ ಮೇಲೆ. ಆದರೆ ನಡುರಾತ್ರಿಯವರೆಗೆ ಕಾಯುವುದಿಲ್ಲ; ಏಳೆಂಟು ಗಂಟೆಗೇ ನಡೆದುಬಿಡುತ್ತದೆ. ಕರಗದ ಪೂಜಾರಿಯು ಕರಗವನ್ನು ತಲೆಯ ಮೇಲೆ ಹೊತ್ತು ಹೊಂಡವನ್ನು ದಾಟಿದನಂತರ ಹತ್ತು-ಹನ್ನೆರಡು ಮಂದಿ ಇತರರು ಹಾಯುತ್ತಾರೆ. ಹಾಯುವ ಮೊದಲು ಹೊಂಡದಿಂದ ಬೊಗಸೆ ಕೆಂಡವನ್ನು ತಮ್ಮ ಉಡಿಯಲ್ಲಿರಿಸಿಕೊಂಡು ಹೊಂಡಕ್ಕೆ ಪ್ರದಕ್ಷಿಣೆ ಮಾಡಿ ಅನಂತರ ಆ ಕೆಂಡವನ್ನು

ಹೊಂಡಕ್ಕೇ ಮತ್ತೆ ಸುರುವಿ ಹೊಂಡ ಹಾಯತೊಡಗುವರು.

ಕರಗವು ಹೊಂಡ ಹಾದಮೇಲೆ ತೇರುಗಳು ಹೊರಡುತ್ತವೆ. ಅರ್ಜುನ-ದ್ರೌಪದಿಯರು, ಭೀಮಾರ್ಜುನರು, ಪಂಚಪಾಂಡವರು ಹೀಗೆ ಬೇರೆ ಬೇರೆ ಮೂರ್ತಿಗಳನ್ನು ಮೂರು ತೇರುಗಳಲ್ಲಿ ಬಿಜಯಮಾಡಿಸಿಕೊಂಡು ಹೋಗುವುದು ವಾಡಿಕೆ. ಹೊಂಡ ಹಾಯುವ ಭಕ್ತನು ತನ್ನ ಉಡಿಯಲ್ಲಿ ನೂರಾರು ನಿಂಬೆಹಣ್ಣುಗಳನ್ನು ಕಟ್ಟಿಕೊಂಡಿರುತ್ತಾನೆ. ಹೊಂಡ ಹಾದ ನಂತರ ಈ ನಿಂಬೆ ಹಣ್ಣುಗಳನ್ನೇ ಪ್ರಸಾದವಾಗಿ ಹಂಚುತ್ತಾನೆ.

ಕಿಲಾರಿರಸ್ತೆಯ ಕರಗದಲ್ಲಿ ಪೂಜಾರಿಯು ತಾಮ್ರದ ಕಲಶವೊಂದನ್ನೇ ಕರಗವಾಗಿ ಹೊರುತ್ತಾನೆ. ಈ ಕಲಶವು ಗುಡಿಯಲ್ಲಿ ದಿನವೂ ಪೂಜೆಗೊಳ್ಳುವುದೇ. ಬ್ರಹ್ಮ, ವಿಷ್ಣು, ಮಹೇಶ್ವರರು ಈ ಕಲಶದಲ್ಲಿ ಸನ್ನಿಹಿತರಾಗಿರುವರೆಂದೂ ಕಲಶವೇ ಆದಿಶಕ್ತಿಯ ಅಧಿಷ್ಠಾನವೆಂದೂ ನಂಬಿಕೆ. ಇದನ್ನು ತಲೆಯ ಮೇಲೆ ಹೊರದೆ ಬಗಲಲ್ಲಿರಿಸಿಕೊಂಡು ಸಂಚರಿಸುವುದು ಇಲ್ಲಿನ ವಿಶೇಷ.

ಅಂತೂ ಕರಗಪದ್ಧತಿಯಲ್ಲಿ ಸಣ್ಣಪುಟ್ಟ ಭೇದಗಳಿದ್ದರೂ ಕಲ್ಪನೆಯಂತೂ ಒಂದೇ. ತುಂಬ ಪ್ರಾಚೀನ ವಿಧಿಯೆನ್ನುವುದರಲ್ಲಿ ಅಡ್ಡಿಯಿಲ್ಲ. ಮಾತೃದೇವತೆಯ ಆರಾಧನೆ ಬೆಳೆದುಬಂದ ದಾರಿಯಲ್ಲಿ ಇದು ಮೊದಮೊದಲೇ ಕಾಣಿಸಿಕೊಂಡ ಮೈಲಿಗಲ್ಲು. ದಕ್ಷಿಣ ದೇಶದಲ್ಲೆಲ್ಲ ಇದು ನಡೆಯುತ್ತಲೇ ಬಂದಿದ್ದರೂ ಬೆಂಗಳೂರಿನ ಹಲಸೂರುಪೇಟೆಯ ಗುಡಿಯಲ್ಲಿ ನಡೆಯುತ್ತಿರುವಷ್ಟು ವೈಭವ, ವಿಧಿವಿಸ್ತಾರ, ಜನಾದರಣೆಗಳು ಬೇರೆಲ್ಲಿಯೂ ಕಾಣಸಿಗುವುದಿಲ್ಲ.

ಐ ಬಿ ಎಚ್ ಪ್ರಕಾಶನ
ಬೆಂಗಳೂರು

# ...ಂಡಿಯ ಬುಕ್ ಹೌಸ್



370